Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )


भाग IX अनुभाग 1

PART IX SECTION 1

ಭಾಗ IX ವಿಭಾಗ 1

**प्राधिकार से प्रकाशित**

Published by Authority

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. १ | नई दिल्ली, शुक्रवार, एप्रील ६, २०१२ | वैशाक १७, १९३४ (शका) | खंड. ४८ |
| No. 1 | New Delhi, Friday, April 6, 2012 | Vaishakha 17, 1934 (Saka) | Vol. 48 |
| ಸಂ. ೧ | ನವ ದೆಹಲಿ, ಶುಕ್ರವಾರ, ಏಪ್ರಿಲ್ ೬, ೨೦೧೨ | ವೈಶಾಖ ೧೭, ೧೯೩೪ (ಶಕ) | ಸಂಪುಟ. ೪೮ |


**Ministry of Law and Justice**

(Legislative Department)

New Delhi, 6th April, 2012

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 6ನೇ ಏಪ್ರಿಲ್, 2012**

The Translation in Kannada of the following Acts, namely :- (1) The Energy Conservation Act, 2001 (2) The Haj Committee Act, 2002 (3) The Multi-State Co-operative Societies Act, 2002 (4) The Central Educational Institutions (Reservation in Admission) Act, 2006 (5) The Government Securities Act, 2006 (6) The Science and Engineering Research Board Act, 2008 (7) The Unorganised Workers Social Security Act, 2008 (8) The National Investigation Agency Act, 2008 and (9) The Right of Children to Free and Compulsory Education Act, 2009 - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮ ಎಂದರೆ:- (1) ಇಂಧನ ಶಕ್ತಿ ಸಂರಕ್ಷಣಾ ಅಧಿನಿಯಮ, 2001 (2) ಹಜ್ ಸಮಿತಿ ಅಧಿನಿಯಮ, 2002 (3) ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002 (4) ಕೇಂದ್ರೀಯ ಶಿಕ್ಷಣ ಸಂಸ್ಥೆಗಳ (ಪ್ರವೇಶದಲ್ಲಿ ಮೀಸಲಾತಿ) ಅಧಿನಿಯಮ, 2006 (5) ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006 (6) ವಿಜ್ಞಾನ ಮತ್ತು ಇಂಜಿನಿಯರಿಂಗ್ ಸಂಶೋಧನಾ ಮಂಡಳಿ ಅಧಿನಿಯಮ, 2008 (7) ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಅಧಿನಿಯಮ, 2008 (8) ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008 ಮತ್ತು (9) ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 - ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

The Haj Committee Act 2002

# ಹಜ್ ಸಮಿತಿ ಅಧಿನಿಯಮ, 2002

(2002 ರ ಅಧಿನಿಯಮ ಸಂಖ್ಯೆ 35)

[11ನೇ ಜೂನ್, 2007]

ಮುಸ್ಲಿಮರು ಹಜ್ ಯಾತ್ರೆ ಕೈಗೊಳ್ಳಲು ವ್ಯವಸ್ಥೆಗಳನ್ನು ಮಾಡುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಭಾರತ ಹಜ್ ಸಮಿತಿಯನ್ನು ಮತ್ತು ರಾಜ್ಯ ಹಜ್ ಸಮಿತಿಗಳನ್ನು ಸ್ಥಾಪಿಸುವುದಕ್ಕಾಗಿ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.–

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಹಜ್ ಸಮಿತಿ ಅಧಿನಿಯಮ, 2002 ಎಂದು ಕರೆಯತಕ್ಕದ್ದು.

(2) ಇದು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ಗೊತ್ತುಪಡಿಸಬಹುದಾದಂತಹ ದಿನಾಂಕದಂದು ಅಥವಾ ದಿನಾಂಕಗಳಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಮತ್ತು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಉಪವಿಧಿಗಳು" ಎಂದರೆ 45ನೇ ಪ್ರಕರಣದ ಮೇರೆಗೆ ರಚಿಸಿದ ಉಪ ವಿಧಿಗಳು;

(ಬಿ) "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಕಾರ್ಯನಿರ್ವಾಹಕ ಅಧಿಕಾರಿ" ಎಂದರೆ, ಸಂದರ್ಭಾನುಸಾರ, 16ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ರಾಜ್ಯ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿ;

(ಸಿ) "ಸಮಿತಿ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿತವಾದ ಭಾರತದ ಹಜ್ ಸಮಿತಿ;

(ಡಿ) "ಸದಸ್ಯ" ಎಂದರೆ, ಸಂದರ್ಭಾನುಸಾರ, 4ನೇ ಪ್ರಕರಣದ ಮೇರೆಗೆ ನಾಮನಿರ್ದೇಶಿತನಾದ ಭಾರತದ ಹಜ್ ಸಮಿತಿಯ ಅಥವಾ 18ನೇ ಪ್ರಕರಣದ ಮೇರೆಗೆ ನಾಮನಿರ್ದೇಶಿತನಾದ ರಾಜ್ಯ ಹಜ್ ಸಮಿತಿಯ ಸದಸ್ಯ ಮತ್ತು ಅದರಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನೂ ಒಳಗೊಳ್ಳುತ್ತಾನೆ;

(ಇ) "ಅಧಿಸೂಚನೆ" ಎಂದರೆ, ಸಂದರ್ಭಾನುಸಾರ, ಭಾರತ ರಾಜಪತ್ರದಲ್ಲಿ ಅಥವಾ ರಾಜ್ಯದ ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆ.

(ಎಫ್) "ತೀರ್ಥಯಾತ್ರಿಕ" ಎಂದರೆ ಹಜ್‌ಗೆ ಹೋಗುವ ಮತ್ತು ಹಜ್‌ನಿಂದ ಹಿಂದಿರುಗವ ಒಬ್ಬ ಮುಸ್ಲಿಂ;

(ಜಿ) "ನಿಯಮಿಸಿದ" ಎಂದರೆ, ಸಂದರ್ಭಾನುಸಾರ, ಕೇಂದ್ರ ಸರ್ಕಾರವು 44ನೇ ಪ್ರಕರಣದ ಮೇರೆಗೆ ಅಥವಾ ರಾಜ್ಯ ಸರ್ಕಾರವು 47ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಿರುವಂಥದ್ದು;

(ಹೆಚ್) "ರಾಜ್ಯ ಸಮಿತಿ" ಎಂದರೆ, 18ನೇ ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಹಜ್ ಸಮಿತಿ ಮತ್ತು ಇದು ಜಂಟಿ ರಾಜ್ಯ ಸಮಿತಿಯನ್ನು ಒಳಗೊಳ್ಳುತ್ತದೆ;

(ಐ) ಒಕ್ಕೂಟ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ "ರಾಜ್ಯ ಸರ್ಕಾರ" ಎಂದರೆ ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯು ನೇಮಕ ಮಾಡಿದ ಆ ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತಗಾರ.

## ಅಧ್ಯಾಯ – II

## ಭಾರತದ ಹಜ್ ಸಮಿತಿ

**3. ಭಾರತದ ಹಜ್ ಸಮಿತಿಯ ರಚನೆ ಮತ್ತು ನಿಗಮನ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಗೊತ್ತುಪಡಿಸಬಹುದಾದಂತಹ ದಿನಾಂಕದಿಂದ ಜಾರಿಗೆ ಬರುವಂತೆ, ಭಾರತದ ಹಜ್ ಸಮಿತಿ ಎಂಬ ಹೆಸರಿನ ಸಮಿತಿಯನ್ನು ರಚಿಸತಕ್ಕದ್ದು.

(2) ಸಮಿತಿಯು ಮೇಲೆ ಹೇಳಿದ ಹೆಸರಿನ, ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಹಾಗೂ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಅರ್ಜಿಸಲು, ಹೊಂದಲು ಮತ್ತು ವಿಲೆ ಮಾಡಲು, ಧರ್ಮಾರ್ಥ ನ್ಯಾಸವನ್ನು ಅಥವಾ ದತ್ತಿಯನ್ನು ರಚಿಸಲು ಹಾಗೂ ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಸಮಿತಿಯು ತನ್ನ ಕೇಂದ್ರ ಕಚೇರಿಯನ್ನು ಮುಂಬಯಿಯಲ್ಲಿ ಹೊಂದಿರತಕ್ಕದ್ದು ಮತ್ತು ತನ್ನ ಕಾರ್ಯನಿರ್ವಹಣೆಗೆ ಅಗತ್ಯವೆಂದು ಸಮಿತಿಯು ಪರಿಗಣಿಸಿದಾಗ, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ಹೆಚ್ಚುವರಿ ಪ್ರಾದೇಶಿಕ ಕಚೇರಿಗಳನ್ನು ತೆರೆಯಬಹುದು.

**4. ಸಮಿತಿಯ ಸಂರಚನೆ.–** ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಸಂಸತ್ತಿನ ಮೂವರು ಸದಸ್ಯರು, ಅವರಲ್ಲಿ ಲೋಕ ಸಭೆಯಲ್ಲಿನ ಮುಸ್ಲಿಂ ಸದಸ್ಯರ ಪೈಕಿ ಲೋಕಸಭಾಧ್ಯಕ್ಷನು ನಾಮನಿರ್ದೇಶಿಸುವ ಇಬ್ಬರು ಸದಸ್ಯರು ಹಾಗೂ ರಾಜ್ಯ ಸಭೆಯಲ್ಲಿನ ಮುಸ್ಲಿಂ ಸದಸ್ಯರ ಪೈಕಿ ರಾಜ್ಯಸಭೆಯ ಸಭಾಪತಿಯು ನಾಮನಿರ್ದೇಶಿಸುವ ಒಬ್ಬ ಸದಸ್ಯ:

ಪರಂತು, ಸಂಸತ್ತಿನ ಸದಸ್ಯನು, ಸದಸ್ಯನಾಗಿರುವುದು ನಿಂತುಹೋದ ಮೇಲೆ, ಸಮಿತಿಯ ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು ಮತ್ತು ಸಂದರ್ಭಾನುಸಾರ, ಲೋಕಸಭೆಯ ಅಧ್ಯಕ್ಷನು ಅಥವಾ

ರಾಜ್ಯ ಸಭೆಯ ಸಭಾಪತಿಯು ಕೇಂದ್ರ ಸರ್ಕಾರದ ಕೋರಿಕೆಯ ಮೇರೆಗೆ ಹೊಸ ನಾಮನಿರ್ದೇಶನ ಮಾಡತಕ್ಕದ್ದು.

(ii) ಸಮಿತಿಯು ಒಂಭತ್ತು ಮುಸ್ಲಿಂ ಸದಸ್ಯರನ್ನು ಆಯ್ಕೆ ಮಾಡತಕ್ಕದ್ದು, ಕಳೆದ ಮೂರು ವರ್ಷಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯ ತೀರ್ಥ ಯಾತ್ರಿಕರನ್ನು ಕಳುಹಿಸಿದ ರಾಜ್ಯಗಳಿಂದ ಮೂವರನ್ನು ಮತ್ತು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂಥ ವಲಯಗಳಿಂದ ತಲಾ ಒಬ್ಬರನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಆಯ್ಕೆ ಮಾಡತಕ್ಕದ್ದು:

ಪರಂತು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ವಲಯದಲ್ಲಿ ಬರುವ ರಾಜ್ಯದಿಂದ ಒಬ್ಬನಿಗಿಂತ ಹೆಚ್ಚು ಸದಸ್ಯರನ್ನು ಆಯ್ಕೆ ಮಾಡತಕ್ಕದ್ದಲ್ಲ;

(iii) ಪದನಿಮಿತ್ತ ಸದಸ್ಯರಾಗಿ, ವಿದೇಶಿ ವ್ಯವಹಾರಗಳು, ಗೃಹ, ಹಣಕಾಸು ಮತ್ತು ನಾಗರಿಕ ವಿಮಾನ ಯಾನ ಮಂತ್ರಾಲಯಗಳನ್ನು ಪ್ರತಿನಿಧಿಸಲು ಭಾರತ ಸರ್ಕಾರವು ನಾಮನಿರ್ದೇಶಿದ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ನಾಲ್ವರು ವ್ಯಕ್ತಿಗಳು;

(iv) ಏಳು ಜನ ಮುಸ್ಲಿಂ ಸದಸ್ಯರನ್ನು ಈ ಕೆಳಕಂಡ ವ್ಯಕ್ತಿಗಳ ಪ್ರವರ್ಗಗಳಿಂದ ಕೇಂದ್ರ ಸರ್ಕಾರವು ನಾಮನಿರ್ದೇಶಿಸತಕ್ಕದ್ದು, ಎಂದರೆ:–

(ಎ) ಸಾರ್ವಜನಿಕ ಆಡಳಿತ, ಹಣಕಾಸು, ಶಿಕ್ಷಣ, ಸಂಸ್ಕೃತಿ ಅಥವಾ ಸಮಾಜ ಸೇವೆಯಲ್ಲಿ ವಿಶೇಷ ಜ್ಞಾನವನ್ನು ಹೊಂದಿರುವ ಇಬ್ಬರು ಸದಸ್ಯರು ಮತ್ತು ಅವರಲ್ಲಿ ಒಬ್ಬನು ಷಿಯಾ ಮುಸ್ಲಿಂ ಆಗಿರತಕ್ಕದ್ದು;

(ಬಿ) ಇಬ್ಬರು ಮಹಿಳಾ ಸದಸ್ಯರು, ಅವರಲ್ಲಿ ಒಬ್ಬರು ಷಿಯಾ ಮುಸ್ಲಿಂ ಆಗಿರತಕ್ಕದ್ದು;

(ಸಿ) ಮುಸ್ಲಿಂ ಧರ್ಮ ಶಾಸ್ತ್ರದ ಮತ್ತು ಕಾನೂನಿನ ವಿಶೇಷ ಜ್ಞಾನವನ್ನು ಹೊಂದಿರುವ ಮೂವರು ಸದಸ್ಯರು, ಅವರ ಪೈಕಿ ಒಬ್ಬರು ಷಿಯಾ ಮುಸ್ಲಿಂ ಆಗಿರತಕ್ಕದ್ದು.

**5. ಸದಸ್ಯರ ಅಧಿಸೂಚನೆ.**– 4ನೇ ಪ್ರಕರಣದ ಮೇರೆಗೆ ಸಮಿತಿಯ ಸದಸ್ಯರನ್ನು ನಾಮನಿರ್ದೇಶನ ಮಾಡಿದ ನಂತರ ಆದಷ್ಟು ಬೇಗನೆ, ಕೇಂದ್ರ ಸರ್ಕಾರವು, ಅಂತಹ ಎಲ್ಲ ಸದಸ್ಯರ ಹೆಸರುಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

**6. ಪದಾವಧಿ.**– (1) ಸಮಿತಿಯ ಸದಸ್ಯರ ಪದಾವಧಿಯು (ಪದನಿಮಿತ್ತ ಸದಸ್ಯರ ಮತ್ತು ಆಕಸ್ಮಿಕ ಖಾಲಿಸ್ಥಾನಗಳಿಗೆ ತುಂಬಿದ ಸದಸ್ಯರ ಹೊರತುಪಡಿಸಿ) 5ನೇ ಪ್ರಕರಣದ ಮೇರೆಗೆ ಸದಸ್ಯರ ಪಟ್ಟಿಯನ್ನು ಪ್ರಕಟಿಸಿದ ದಿನದ ನಂತರದ ದಿನದಂದು ಪ್ರಾರಂಭವಾಗುವ ಮೂರು ವರ್ಷಗಳಾಗಿರತಕ್ಕದ್ದು:

ಪರಂತು, ಸಮಿತಿಯ ಸದಸ್ಯರ ಪದಾವಧಿಯನ್ನು ಒಂದು ಬಾರಿಗೆ ಆರು ತಿಂಗಳುಗಳನ್ನು ಮೀರದ ಅವಧಿಗೆ, ಆದರೆ, ಯಾವುದೇ ಸಂದರ್ಭದಲ್ಲಿ ಒಟ್ಟು ಒಂದು ವರ್ಷದ ಅವಧಿಯನ್ನು ಮೀರದಂತೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ವಿಸ್ತರಿಸಬಹುದು.

(2) ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯವಾಗಬೇಕಾದ ಭತ್ಯೆಗಳು ಮತ್ತು ಅವರಿಗೆ ಸಂಬಂಧಿಸಿದ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**7. ಅಧ್ಯಕ್ಷ ಮತ್ತು ಉಪಾಧ್ಯಕ್ಷ.–** (1) ಪ್ರಕರಣ 5ರ ಮೇರೆಗೆ ಸಮಿತಿಯ ಸದಸ್ಯರ ಹೆಸರುಗಳನ್ನು ಪ್ರಕಟಿಸಿದ ನಂತರ ಕೇಂದ್ರ ಸರ್ಕಾರವು ಹಾಗೆ ಪ್ರಕಟಿಸಿದ ನಲವತ್ತೈದು ದಿವಸಗಳೊಳಗೆ ಸಮಿತಿಯ ಮೊದಲ ಸಭೆಯನ್ನು ಕರೆಯತಕ್ಕದ್ದು. ಆ ಸಭೆಯಲ್ಲಿ ಸಮಿತಿಯು ಅದರ ಸದಸ್ಯರ ಪೈಕಿ ಒಬ್ಬ ಅಧ್ಯಕ್ಷನನ್ನು ಮತ್ತು ಇಬ್ಬರು ಉಪಾಧ್ಯಕ್ಷರನ್ನು ಚುನಾಯಿಸತಕ್ಕದ್ದು:

ಪರಂತು, ಒಬ್ಬ ಮಂತ್ರಿಯು ಸಮಿತಿಯ ಅಧ್ಯಕ್ಷನಾಗತಕ್ಕದ್ದಲ್ಲ ಮತ್ತು ಪದನಿಮಿತ್ತ ಸದಸ್ಯರು ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆಯಲ್ಲಿ ಭಾಗವಹಿಸತಕ್ಕದ್ದಲ್ಲ.

(2) ಸಮಿತಿಯು ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಚುನಾಯಿಸಲು ವಿಫಲವಾದರೆ, ಕೇಂದ್ರ ಸರ್ಕಾರವು ಸಮಿತಿಯ ಸದಸ್ಯರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಸಂದರ್ಭಾನುಸಾರ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಬಹುದು.

(3) ಅಧ್ಯಕ್ಷನು, ನಿಯಮಿಸಬಹುದಾದಂತಹ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(4) ಉಪಾಧ್ಯಕ್ಷನು, ಸಮಿತಿಯು ಈ ಬಗ್ಗೆ ರಚಿಸಿದ ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂತಹ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು:

ಪರಂತು, ಅಂತಹ ಉಪವಿಧಿಗಳನ್ನು ರಚಿಸುವವರೆಗೆ, ಉಪಾಧ್ಯಕ್ಷನು, ಈ ಬಗ್ಗೆ ಅಧ್ಯಕ್ಷನು ಮಾಡಿದ ಆದೇಶದ ಮೂಲಕ ನಿರ್ಧರಿಸಬಹುದಾದಂತಹ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(5) ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ಚುನಾಯಿತರಾಗಿರುವುದನ್ನು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು.

(6) ಅಧ್ಯಕ್ಷನ ಮತ್ತು ಸಂದರ್ಭಾನುಸಾರ ಉಪಾಧ್ಯಕ್ಷರ ಪದಾವಧಿಯು ಸಮಿತಿಯ ಅವಧಿಯೊಂದಿಗೆ ಕೊನೆಯಾಗತಕ್ಕದ್ದು ಮತ್ತು ಯಾರೇ ವ್ಯಕ್ತಿಯು ಎರಡಕ್ಕಿಂತ ಹೆಚ್ಚಿನ ನಿರಂತರ ಅವಧಿಗಳಿಗೆ ಅಧ್ಯಕ್ಷನ ಅಥವಾ ಸಂದರ್ಭಾನುಸಾರ, ಉಪಾಧ್ಯಕ್ಷರ ಪದವನ್ನು ಹೊಂದಿರತಕ್ಕದ್ದಲ್ಲ.

(7) ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಪದದಲ್ಲಿನ ಯಾವುದೇ ಆಕಸ್ಮಿಕ ಖಾಲಿಸ್ಥಾನವನ್ನು (1)ನೇ ಉಪಪ್ರಕರಣದ ಅಥವಾ ಸಂದರ್ಭಾನುಸಾರ (2)ನೇ ಉಪಪ್ರಕರಣಕ್ಕನುಸಾರವಾಗಿ ಉಳಿದ ಅವಧಿಗೆ ಭರ್ತಿ ಮಾಡತಕ್ಕದ್ದು.

**8. ಸಮಿತಿಯ ಪುನರ್ ರಚನೆ.–** (1) ಕೇಂದ್ರ ಸರ್ಕಾರವು, ಸಂದರ್ಭಾನುಸಾರ, ಸಮಿತಿಯ ಅವಧಿಯ ಅಥವಾ ವಿಸ್ತರಿತ ಅವಧಿಯ ಮುಕ್ತಾಯಕ್ಕೆ ಕನಿಷ್ಠ ನಾಲ್ಕು ತಿಂಗಳುಗಳಿಗೆ ಮುಂಚೆ ಹೊಸ ಸಮಿತಿಯ ಪುನರ್ ರಚನೆಗೆ ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಅಥವಾ ತೆಗೆದುಕೊಳ್ಳುವಂತೆ ಮಾಡತಕ್ಕದ್ದು.

(2) ಹೊರಹೋಗುತ್ತಿರುವ ಸದಸ್ಯನು ಎರಡಕ್ಕಿಂತ ಹೆಚ್ಚಿಲ್ಲದ ಅವಧಿಗಳಿಗೆ ಸಮಿತಿಗೆ ಪುನರ್ ನಾಮನಿರ್ದೇಶನಗೊಳ್ಳಲು ಅರ್ಹನಾಗಿರತಕ್ಕದ್ದು:

ಪರಂತು, ಸದಸ್ಯರುಗಳ ಪೈಕಿ ಶೇಕಡ ಐವತ್ತಕ್ಕಿಂತ ಹೆಚ್ಚಿಲ್ಲದಷ್ಟು ಸದಸ್ಯರನ್ನು ಎರಡನೇ ಅವಧಿಗೆ ನಿಯಮಿಸಬಹುದಾದಂಥಹ ರೀತಿಯಲ್ಲಿ ಪುನರ್ ನಾಮನಿರ್ದೇಶನ ಮಾಡಬಹುದು.

**9. ಸಮಿತಿಯ ಕರ್ತವ್ಯಗಳು.–** (1) ಸಮಿತಿಯ ಕರ್ತವ್ಯಗಳು,–

(i) ತೀರ್ಥ ಯಾತ್ರಿಕರಿಗೆ ಉಪಯುಕ್ತವಾಗುವ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಪ್ರಸಾರ ಮಾಡುವುದು ಮತ್ತು ತೀರ್ಥ ಯಾತ್ರಿಕರಿಗೆ ವಿಷಯ ಪರಿಚಯ ಮತ್ತು ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವುದು;

(ii) ತೀರ್ಥ ಯಾತ್ರಿಕರಿಗೆ ಲಸಿಕೆ ಹಾಕುವುದು, ರೋಗ ನಿರೋಧಕ ಚುಚ್ಚುಮದ್ದು ಹಾಕುವುದು, ವೈದ್ಯಕೀಯ ತಪಾಸಣೆ, ತೀರ್ಥ ಯಾತ್ರಿಕ ಪಾಸುಗಳನ್ನು ನೀಡುವುದು ಮತ್ತು ವಿದೇಶಿ ವಿನಿಮಯ ಸೇರಿದಂತೆ ಎಲ್ಲ ವಿಷಯಗಳಲ್ಲಿ ತೀರ್ಥ ಯಾತ್ರೆಗೆ ಹೋಗುವಾಗ ಅಥವಾ ತೀರ್ಥ ಯಾತ್ರೆಯಿಂದ ಬರುವಾಗ, ಭಾರತದಲ್ಲಿನ ಹಡಗು ಹತ್ತುವ ಅಥವಾ ಇಳಿಯುವ ಸ್ಥಳದಲ್ಲಿ ತೀರ್ಥ ಯಾತ್ರಿಕರು ತಂಗಿರುವ ಸಂದರ್ಭದಲ್ಲಿ ಅವರಿಗೆ ಸಲಹೆ ನೀಡುವುದು ಮತ್ತು ನೆರವು ನೀಡುವುದು ಹಾಗೂ ಅಂಥ ವಿಷಯಗಳಲ್ಲಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದು;

(iii) ಸಂಕಷ್ಟದ ಸಂದರ್ಭದಲ್ಲಿ ತೀರ್ಥ ಯಾತ್ರಿಕರಿಗೆ ಪರಿಹಾರ ನೀಡುವುದು;

(iv) ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ವಾರ್ಷಿಕ ಹಜ್ ಯೋಜನೆಯನ್ನು ಅಂತಿಮಗೊಳಿಸುವುದು ಮತ್ತು ವಿಮಾನದ ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ಪ್ರಯಾಣಿಸುವುದಕ್ಕೆ ವ್ಯವಸ್ಥೆಗಳನ್ನು ಮಾಡುವುದೂ ಸೇರಿದಂತೆ ಯೋಜನೆಯನ್ನು ಕಾರ್ಯಗತಗೊಳಿಸುವುದು ಮತ್ತು ವಸತಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಲಹೆ ನೀಡುವುದು;

(v) ಸಮಿತಿಯ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವುದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ, ಅದರ ಸಹಮತಿಗಾಗಿ ಹಣಕಾಸು ವರ್ಷ ಪ್ರಾರಂಭವಾಗುವುದಕ್ಕೆ ಕನಿಷ್ಠ ಮೂರು ತಿಂಗಳುಗಳ ಮುಂಚೆ ಒಪ್ಪಿಸುವುದು;

(vi) ತೀರ್ಥ ಯಾತ್ರಿಕರಿಗೆ ಪ್ರಯಾಣ ಸೌಲಭ್ಯಗಳನ್ನು ಖಚಿತಪಡಿಸುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ, ರೈಲ್ವೆ, ವಿಮಾನಯಾನ ಸಂಸ್ಥೆಗಳು ಮತ್ತು ಟ್ರಾವೆಲ್ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸುವುದು;

(vii) ಸಾಮಾನ್ಯವಾಗಿ ತೀರ್ಥ ಯಾತ್ರಿಕರ ಕಲ್ಯಾಣದ ಬಗ್ಗೆ ಗಮನ ಹರಿಸುವುದು;

(viii) ಸಮಿತಿಯು ಈ ಬಗ್ಗೆ ರಚಿಸಿದ ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂತೆ ಸಮಿತಿಯ ಅಂಥ ವ್ಯವಹರಣೆಗಳನ್ನು ಮತ್ತು ತೀರ್ಥ ಯಾತ್ರಿಕರ ಹಿತಾಸಕ್ತಿಯ ಅಂಥ ವಿಷಯಗಳನ್ನು ಪ್ರಕಟಿಸುವುದು;

(ix) ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಹಜ್‌ಗೆ ಸಂಬಂಧಪಟ್ಟ ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು

– ಆಗಿರತಕ್ಕದ್ದು.

(2) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕರ್ತವ್ಯಗಳ ನಿರ್ವಹಣೆಯಲ್ಲಿ ಸಮಿತಿಗೆ ಎಲ್ಲ ಸೂಕ್ತ ನೆರವನ್ನು ನೀಡತಕ್ಕದ್ದು.

**10. ಸಮಿತಿಯ ಸಭೆಗಳು.–** (1) ಸಮಿತಿಯು, ಹಜ್ ಯಾತ್ರೆಗೆ ಯೋಜನೆಯನ್ನು ರೂಪಿಸುವುದಕ್ಕಾಗಿ ಮತ್ತು ವ್ಯವಸ್ಥೆಗಳನ್ನು ಮಾಡುವುದಕ್ಕಾಗಿ ಹಜ್ ಯಾತ್ರಾ ಕಾಲ ಪ್ರಾರಂಭವಾಗುವುದಕ್ಕೆ ಮುಂಚೆ, ವರ್ಷದಲ್ಲಿ ಕನಿಷ್ಠ ಮೂರು ಬಾರಿ ಮತ್ತು ಆ ನಂತರ ಸಮಿತಿಯು ಮಾಡಿದ ಎಲ್ಲ ವ್ಯವಸ್ಥೆಗಳನ್ನು ಪುನರ್ ಪರಿಶೀಲಿಸಲು ಒಂದು ಬಾರಿ ಸಭೆ ಸೇರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಭೆಗಳ ಜೊತೆಗೆ ಸಮಿತಿಯು, ಕನಿಷ್ಠ ಮೂರನೇ ಒಂದು ಭಾಗದಷ್ಟು ಸದಸ್ಯರು ಕೋರಿದಾಗ ಅಥವಾ ಅಧ್ಯಕ್ಷನು ಅವಶ್ಯವೆಂದು ಪರಿಗಣಿಸಿದಾಗ ಸಭೆಗಳನ್ನು ನಡೆಸಬಹುದು.

(3) ಸಮಿತಿಯ ಯಾವುದೇ ಸಭೆಯಲ್ಲಿ ಕೋರಂ ಆಗುವುದಕ್ಕೆ ಅವಶ್ಯವಾದ ಸದಸ್ಯರ ಸಂಖ್ಯೆಯು ಅದರ ಸದಸ್ಯರ ಮೂರನೇ ಒಂದು ಭಾಗವಾಗಿರತಕ್ಕದ್ದು.

(4) ಎಲ್ಲ ವಿಷಯಗಳನ್ನು ಹಾಜರಿರುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಸಮಾನ ಮತಗಳು ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅಧ್ಯಕ್ಷತೆ ವಹಿಸಿರುವ ಇತರ ವ್ಯಕ್ತಿಯು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(5) ಸಮಿತಿಯು, ತನ್ನ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**11. ಸ್ಥಾಯೀ ಸಮಿತಿಗಳ ಮತ್ತು ಉಪ ಸಮಿತಿಗಳ ನೇಮಕ.–** (1) ಸಮಿತಿಯು, ಹಣಕಾಸು ಮತ್ತು ಹಜ್ ವ್ಯವಸ್ಥೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವುದಕ್ಕಾಗಿ, ತನ್ನ ಸದಸ್ಯರ ಪೈಕಿಯಿಂದ, ಸಮಿತಿಯು ಈ ಬಗ್ಗೆ ರಚಿಸಿದ ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂಥ ಸಂಖ್ಯೆಯ ಸದಸ್ಯರನ್ನು ಒಳಗೊಂಡಿರುವ ಮತ್ತು ಅಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರುವ, ಸಮಿತಿಯ ಉಪಾಧ್ಯಕ್ಷನು ಪ್ರತಿಯೊಂದರ ಮುಖ್ಯಸ್ಥನಾಗಿರುವ ಎರಡು ಸ್ಥಾಯೀ ಸಮಿತಿಗಳನ್ನು ನೇಮಕ ಮಾಡತಕ್ಕದ್ದು:

ಪರಂತು, ಅಧ್ಯಕ್ಷನು ಸ್ಥಾಯೀ ಸಮಿತಿಯ ಸಭೆಗೆ ಹಾಜರಾದ ಸಂದರ್ಭದಲ್ಲಿ ಅವನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(2) ಸಮಿತಿಯು ತಾನು ಸೂಕ್ತವೆಂದು ಭಾವಿಸಬಹುದಾದಂಥ ಉದ್ದೇಶಗಳಿಗಾಗಿ ಇತರ ಉಪ ಸಮಿತಿಗಳನ್ನು ಸಹ ನೇಮಕ ಮಾಡಬಹುದು ಮತ್ತು ಅಂತಹ ಉಪಸಮಿತಿಯು, ಸಮಿತಿಯು ಈ ಬಗ್ಗೆ ರಚಿಸಿದ ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂತಹ ಸಂಖ್ಯೆಯ ಸದಸ್ಯರನ್ನು ಮತ್ತು ಇತರ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು.

**12. ಸಮಿತಿಯ ಸದಸ್ಯನಾಗಿ ನಾಮನಿರ್ದೇಶಿತನಾಗುವುದಕ್ಕೆ ಅಥವಾ ಮುಂದುವರಿಯುವುದಕ್ಕೆ ಅನರ್ಹತೆ.**– ಒಬ್ಬ ವ್ಯಕ್ತಿಯು ಅವನು,–

(i) ಭಾರತದ ನಾಗರಿಕನಾಗಿರದಿದ್ದರೆ;

(ii) 4ನೇ ಪ್ರಕರಣದ (iii)ನೇ ಖಂಡದಲ್ಲಿ ಉಪಬಂಧಿಸಿದಂತೆ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಮುಸ್ಲಿಂ ಆಗಿರದಿದ್ದರೆ;

(iii) ಇಪ್ಪತ್ತೈದು ವರ್ಷಗಿಂತ ಕಡಿಮೆ ವಯಸ್ಸಿನವನಾಗಿದ್ದರೆ;

(iv) ಅಸ್ವಸ್ಥ ಮನಸ್ಸಿನವನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ;

(v) ಅವಿಮುಕ್ತ ದಿವಾಳಿಯಾಗಿದ್ದರೆ;

(vi) ನೈತಿಕ ಅಧಃಪತನವನ್ನೊಳಗೊಂಡ ಅಪರಾಧದಲ್ಲಿ ಅಪರಾಧಿಯೆಂದು ನಿರ್ಣೀತನಾಗಿದ್ದಾನೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ;

(vii) ಹಿಂದಿನ ಸಂದರ್ಭದಲ್ಲಿ,–

(ಎ) ಸದಸ್ಯ ಪದದಿಂದ ಅವನನ್ನು ತೆಗೆದುಹಾಕಿದ್ದರೆ; ಅಥವಾ

(ಬಿ) ತೀರ್ಥ ಯಾತ್ರಿಕರ ಹಿತಾಸಕ್ತಿಗನುಸಾರ ಕಾರ್ಯನಿರ್ವಹಿಸದಿದ್ದುದಕ್ಕಾಗಿ ಅಥವಾ ಭ್ರಷ್ಟಾಚಾರಕ್ಕಾಗಿ ಸಕ್ಷಮ ಪ್ರಾಧಿಕಾರದ ಆದೇಶದ ಮೂಲಕ ಅವನನ್ನು ತೆಗೆದುಹಾಕಿದ್ದರೆ

– ಸಮಿತಿಯ ಸದಸ್ಯನಾಗಿ ನಾಮನಿರ್ದೇಶಿತನಾಗುವುದಕ್ಕೆ ಅಥವಾ ಮುಂದುವರಿಯುವುದಕ್ಕೆ ಅನರ್ಹನಾಗಿರತಕ್ಕದ್ದು.

**13. ಅಧ್ಯಕ್ಷನ, ಉಪಾಧ್ಯಕ್ಷನ ಮತ್ತು ಸದಸ್ಯರ ರಾಜೀನಾಮೆ.**– ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಯಾರೇ ಇತರ ಸದಸ್ಯನು, ತಾನು ಸಹಿ ಮಾಡಿದ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ಅದು ಅಂಥ ರಾಜೀನಾಮೆಯನ್ನು ನೀಡಿದ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು.

**14. ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಮತ್ತು ಸದಸ್ಯರನ್ನು ತೆಗೆದುಹಾಕುವುದು.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸಮಿತಿಯ ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಅಥವಾ ಅದರ ಯಾರೇ ಸದಸ್ಯನನ್ನು, ಅವನು,–

(i) 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳಿಗೆ ಒಳಗಾಗಿದ್ದರೆ ಅಥವಾ ಒಳಗಾದರೆ;

(ii) ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾಗಿದ್ದರೆ ಅಥವಾ ಅವನು ನೀಡಬಹುದಾದಂಥ ಯಾವುದೇ ವಿವರಣೆಯನ್ನು ಆಲಿಸಿದ ನಂತರ, ಸಮಿತಿಯ ಹಿತಾಸಕ್ತಿಗಳಿಗೆ ಅಥವಾ ಯಾತ್ರಿಕರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗುವುದೆಂದು ಕೇಂದ್ರ ಸರ್ಕಾರವು ಪರಿಗಣಿಸುವಂಥ ರೀತಿಯಲ್ಲಿ ಕಾರ್ಯನಿರ್ವಹಿಸಿದರೆ; ಅಥವಾ

(iii) ಸಮಿತಿಯ ಅಭಿಪ್ರಾಯದಲ್ಲಿ, ಸಾಕಷ್ಟು ಕಾರಣವಿಲ್ಲದೆ ಸಮಿತಿಯ ಮೂರು ನಿರಂತರ ಸಭೆಗಳಿಗೆ ಹಾಜರಾಗಲು ವಿಫಲನಾದರೆ

– ತೆಗೆದುಹಾಕಬಹುದು.

(2) ಸಮಿತಿಯ ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು (1)ನೇ ಉಪಪ್ರಕರಣದ ಮೇರೆಗೆ ತೆಗೆದುಹಾಕಿದಲ್ಲಿ, ಅವನು ಸಮಿತಿಯ ಸದಸ್ಯನಾಗಿರುವುದೂ ಸಹ ನಿಂತುಹೋಗತಕ್ಕದ್ದು.

**15. ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವುದು.–** (1) ಸದಸ್ಯನ ಸ್ಥಾನವು ಅವನನ್ನು ತೆಗೆದುಹಾಕುವುದರಿಂದ, ಅವನ ರಾಜೀನಾಮೆಯಿಂದ, ಮರಣದಿಂದ ಅಥವಾ ಅನ್ಯಥಾ ಖಾಲಿಯಾದಾಗ ಹೊಸ ಸದಸ್ಯನನ್ನು ಆತನ ಸ್ಥಾನದಲ್ಲಿ ನಾಮನಿರ್ದೇಶಿಸತಕ್ಕದ್ದು ಅಥವಾ ಸಂದರ್ಭಾನುಸಾರ ಚುನಾಯಿಸತಕ್ಕದ್ದು ಮತ್ತು ಅಂಥ ಸದಸ್ಯನು, ಯಾವ ಸದಸ್ಯನ ಸ್ಥಾನವನ್ನು ಅವನು ತುಂಬುವನೋ ಆ ಸದಸ್ಯನ ಸ್ಥಾನವು ಖಾಲಿಯಾಗಿರದಿದ್ದರೆ ಎಷ್ಟು ಕಾಲದವರೆಗೆ ಆ ಸದಸ್ಯನು ಪದಧಾರಣ ಮಾಡಲು ಹಕ್ಕುಳ್ಳುವನಾಗಿರುತ್ತಿದ್ದನೋ ಅಷ್ಟು ಕಾಲದವರೆಗೆ ಪದಧಾರಣ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗಿನ ಯಾವುದೇ ಆಕಸ್ಮಿಕ ಖಾಲಿಸ್ಥಾನವನ್ನು ಹಿಂದಿನ ಸದಸ್ಯನು ಯಾವ ಪ್ರವರ್ಗಕ್ಕೆ ಸೇರಿದ್ದನೋ ಅದೇ ಪ್ರವರ್ಗದವರಿಂದ ಭರ್ತಿಮಾಡತಕ್ಕದ್ದು.

**16. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ನೌಕರರು.–** (1) ಕೇಂದ್ರ ಸರ್ಕಾರವು, ಭಾರತ ಸರ್ಕಾರದ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರಗಳ ಮುಸ್ಲಿಂ ಅಧಿಕಾರಿಗಳ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ ಮಾಡತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.

(3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಮೂರು ವರ್ಷಗಳ ಅವಧಿಗೆ ನೇಮಕ ಮಾಡತಕ್ಕದ್ದು. ಈ ಅವಧಿಯನ್ನು ಕೇಂದ್ರ ಸರ್ಕಾರವು ಗರಿಷ್ಠ ಒಂದು ವರ್ಷದ ಅವಧಿಗೆ ವಿಸ್ತರಿಸಬಹುದು.

(4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಮಿತಿಯ ತೀರ್ಮಾನಗಳನ್ನು ಕಾರ್ಯಗತಗೊಳಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು:

ಪರಂತು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮತ್ತು ಸಮಿತಿಯ ನಡುವೆ ಯಾವುದೇ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ ಅವನು ಆ ವಿಷಯವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರತಕ್ಕದ್ದು. ಆ ಬಗ್ಗೆ ಅದರ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(5) ಸಮಿತಿಯು, ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಪಡೆದು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ಅವಶ್ಯವೆಂದು ಪರಿಗಣಿಸಬಹುದಾದಂಥ ಇತರ ಅಧಿಕಾರಿಗಳನ್ನು ಹಾಗೂ ನೌಕರರನ್ನು ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ನಿಯೋಜಿಸಿಕೊಳ್ಳಬಹುದು.

46

## ಅಧ್ಯಾಯ – III

### ರಾಜ್ಯ ಹಜ್ ಸಮಿತಿಗಳು

**17. ರಾಜ್ಯ ಹಜ್ ಸಮಿತಿಯ ಸ್ಥಾಪನೆ ಮತ್ತು ನಿಗಮನ.**– (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ರಾಜ್ಯ ಸರ್ಕಾರವು, . . . . . . . (ರಾಜ್ಯದ ಹೆಸರು) ಹಜ್ ಸಮಿತಿ ಎಂಬ ಹೆಸರಿನ ಒಂದು ಸಮಿತಿಯನ್ನು ರಚಿಸತಕ್ಕದ್ದು:

ಪರಂತು, ಯಾವುದೇ ಕಾರಣಗಳಿಂದಾಗಿ ಒಂದು ರಾಜ್ಯಕ್ಕೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಹಜ್ ಸಮಿತಿಯನ್ನು ಸ್ಥಾಪಿಸುವ ಅವಶ್ಯಕತೆಯಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಕಂಡುಬಂದ ಸಂದರ್ಭದಲ್ಲಿ, ಅದು ಆ ತೀರ್ಥ ಯಾತ್ರಿಕರ ಬಗ್ಗೆ ವ್ಯವಹರಿಸಲು ಅಕ್ಕಪಕ್ಕದ ರಾಜ್ಯದ ರಾಜ್ಯ ಹಜ್ ಸಮಿತಿಗೆ ಅಧಿಕಾರ ನೀಡಬಹುದು ಮತ್ತು ಆ ರಾಜ್ಯಗಳಿಗೆ ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಸೂಕ್ತ ಪ್ರಾತಿನಿಧ್ಯಕೊಡುವಂತೆ ಸೂಚಿಸಬಹುದು.

(2) ರಾಜ್ಯ ಸಮಿತಿಯು ಮೇಲೆ ಹೇಳಿದ ಹೆಸರಿನ, ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಹಾಗೂ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು, ಹೊಂದಲು ಮತ್ತು ವಿಲೆ ಮಾಡಲು, ಧರ್ಮಾರ್ಥ ನ್ಯಾಸವನ್ನು ಅಥವಾ ದತ್ತಿಯನ್ನು ರಚಿಸಲು, ಹಾಗೂ ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಅಕ್ಕಪಕ್ಕದ ರಾಜ್ಯಗಳ ಎರಡು ಅಥವಾ ಹೆಚ್ಚು ಸರ್ಕಾರಗಳು, ಅಥವಾ

(ಬಿ) ಕೇಂದ್ರ ಸರ್ಕಾರವು (ಒಂದು ಅಥವಾ ಹೆಚ್ಚು ಒಕ್ಕೂಟ ರಾಜ್ಯಕ್ಷೇತ್ರಗಳ ಸಂಬಂಧದಲ್ಲಿ) ಮತ್ತು ಅಂಥ ಒಕ್ಕೂಟ ರಾಜ್ಯಕ್ಷೇತ್ರದ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳ ಅಕ್ಕಪಕ್ಕದಲ್ಲಿರುವ ಒಂದು ಅಥವಾ ಹೆಚ್ಚು ರಾಜ್ಯಗಳ ಸರ್ಕಾರಗಳು,–

(i) (ಎ) ಖಂಡದಲ್ಲಿ ಉಲ್ಲೇಖಿಸಿರುವ ಪ್ರಕರಣದಲ್ಲಿ, ಭಾಗವಹಿಸುವ ಎಲ್ಲ ರಾಜ್ಯಗಳಿಗಾಗಿ; ಮತ್ತು

(ii) (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಪ್ರಕರಣದಲ್ಲಿ, ಭಾಗವಹಿಸುವ ಒಕ್ಕೂಟ ರಾಜ್ಯಕ್ಷೇತ್ರಕ್ಕಾಗಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳಿಗಾಗಿ ಮತ್ತು ರಾಜ್ಯ ಅಥವಾ ರಾಜ್ಯಗಳಿಗಾಗಿ

– ಜಂಟಿ ರಾಜ್ಯ ಸಮಿತಿಯನ್ನು ರಚಿಸುವುದಕ್ಕೆ ಉಪಬಂಧ ಕಲ್ಪಿಸುವ ಸಲುವಾಗಿ ಒಂದು ಒಪ್ಪಂದ ಮಾಡಿಕೊಳ್ಳಬಹುದು. ಆ ಒಪ್ಪಂದವು, ಅದರಲ್ಲಿ ನಿರ್ದಿಷ್ಟಪಡಿಸಬಹುದಾಂಥ ಅವಧಿಗೆ ಜಾರಿಯಲ್ಲಿರಬೇಕಾದದ್ದು ಮತ್ತು ಹೆಚ್ಚಿನ ಅವಧಿ ಯಾವುದಾದರೂ ಇದ್ದರೆ ಅಂಥ ಅವಧಿಗೆ ನವೀಕರಣಕ್ಕೆ ಒಳಪಡಬೇಕಾದದ್ದು ಆಗಿರತಕ್ಕದ್ದು.

(4) ಈ ಪ್ರಕರಣದ ಮೇರಗಿನ ಒಪ್ಪಂದವನ್ನು (2) ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿದ ಪ್ರಕರಣದಲ್ಲಿ, ಭಾಗವಹಿಸುವ ರಾಜ್ಯಗಳ ಸರ್ಕಾರಿ ರಾಜ್ಯಪತ್ರದಲ್ಲಿ ಮತ್ತು ಆ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ ಪ್ರಕರಣದಲ್ಲಿ ಭಾಗವಹಿಸುವ ಒಕ್ಕೂಟ ರಾಜ್ಯಕ್ಷೇತ್ರದ ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳ ಮತ್ತು ಭಾಗವಹಿಸುವ ರಾಜ್ಯದ ಅಥವಾ ರಾಜ್ಯಗಳ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(5) ರಾಜ್ಯ ಸಮಿತಿಗೆ ಆ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖವು, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಜಂಟಿ ರಾಜ್ಯ ಸಮಿತಿಯನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದು.

**18. ರಾಜ್ಯ ಸಮಿತಿಯ ಸಂರಚನೆ.–** (1) ಒಂದು ರಾಜ್ಯ ಸಮಿತಿಯು, ರಾಜ್ಯ ಸರ್ಕಾರವು ನಾಮನಿರ್ದೇಶಿಸಬೇಕಾದ ಹದಿನಾರು ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) (ಎ) ಆ ರಾಜ್ಯವನ್ನು ಪ್ರತಿನಿಧಿಸುವ ಸಂಸತ್ತಿನ;

(ಬಿ) ರಾಜ್ಯ ವಿಧಾನ ಸಭೆಯ; ಮತ್ತು

(ಸಿ) ವಿಧಾನ ಪರಿಷತ್ತು ಎಲ್ಲಿ ಅಸ್ತಿತ್ವದಲ್ಲಿದೆಯೋ, ಆ ವಿಧಾನ ಪರಿಷತ್ತಿನ

– ಮುಸ್ಲಿಂ ಸದಸ್ಯರಿಂದ ಮೂವರು ಸದಸ್ಯರು;

(ii) ರಾಜ್ಯದಲ್ಲಿರುವ ಸ್ಥಳೀಯ ನಿಕಾಯಗಳನ್ನು ಪ್ರತಿನಿಧಿಸುವ ಮುಸ್ಲಿಂ ಸದಸ್ಯರಿಂದ ಮೂವರು ಸದಸ್ಯರು;

(iii) ಮುಸ್ಲಿಂ ಧರ್ಮಶಾಸ್ತ್ರದಲ್ಲಿ ಮತ್ತು ಕಾನೂನಿನಲ್ಲಿ ವಿಶೇಷ ಜ್ಞಾನ ಹೊಂದಿರುವ ಮೂವರು ಸದಸ್ಯರು, ಅವರಲ್ಲಿ ಒಬ್ಬರು ಷಿಯಾ ಮುಸ್ಲಿಂ ಆಗಿರತಕ್ಕದ್ದು;

(iv) ಸಾರ್ವಜನಿಕ ಆಡಳಿತ, ಹಣಕಾಸು, ಶಿಕ್ಷಣ, ಸಂಸ್ಕೃತಿ ಅಥವಾ ಸಮಾಜ ಸೇವಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಮುಸ್ಲಿಂ ಸ್ವಯಂಸೇವಾ ಸಂಘಟನೆಗಳನ್ನು ಪ್ರತಿನಿಧಿಸುವ ಐವರು ಸದಸ್ಯರು;

(v) ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ; ಮತ್ತು

(vi) ರಾಜ್ಯ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿ, ಇವನು ರಾಜ್ಯ ಸಮಿತಿಯ ಪದನಿಮಿತ್ತ ಸದಸ್ಯನಾಗಿರತಕ್ಕದ್ದು:

ಪರಂತು, ಯಾವುದೇ ಒಕ್ಕೂಟ ರಾಜ್ಯಕ್ಷೇತ್ರ ಸಮಿತಿಯು ಅಥವಾ ಜಂಟಿ ರಾಜ್ಯ ಸಮಿತಿಯು ನಿಯಮಿಸಬಹುದಾದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) (1)ನೇ ಉಪಪ್ರಕರಣದ (i)ನೇ ಮತ್ತು (ii)ನೇ ಖಂಡಗಳಲ್ಲಿ ನಮೂದಿಸಿದ ಪ್ರವರ್ಗಗಳ ಪೈಕಿ ಯಾವುದೇ ಪ್ರವರ್ಗದಲ್ಲಿ ಯಾರೇ ಮುಸ್ಲಿಂ ಸದಸ್ಯನಿರದ ಸಂದರ್ಭದಲ್ಲಿ ಅಥವಾ ಒಂದು ರಾಜ್ಯದಲ್ಲಿ ವಿಧಾನ ಪರಿಷತ್ತು ಇಲ್ಲದಿದ್ದಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ನಾಮನಿರ್ದೇಶನವನ್ನು ಮಾಡಬಹುದು.

**19. ಸದಸ್ಯರ ಬಗ್ಗೆ ಅಧಿಸೂಚನೆ.–** 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸಮಿತಿಯ ಸದಸ್ಯರನ್ನು ನಾಮನಿರ್ದೇಶನ ಮಾಡಿದ ನಂತರ ಆದಷ್ಟು ಬೇಗನೆ, ರಾಜ್ಯ ಸರ್ಕಾರವು, ಆ ರಾಜ್ಯದ ರಾಜ್ಯಪತ್ರದಲ್ಲಿ, ಅಂಥ ಎಲ್ಲ ಸದಸ್ಯರ ಹೆಸರುಗಳನ್ನು ಪ್ರಕಟಿಸತಕ್ಕದ್ದು.

**20. ಪದಾವಧಿ.–** (1) ರಾಜ್ಯ ಸಮಿತಿಯ ಸದಸ್ಯರ ಪದಾವಧಿಯು (ಪದನಿಮಿತ್ತ ಸದಸ್ಯರ ಮತ್ತು ಆಕಸ್ಮಿಕ ಖಾಲಿಸ್ಥಾನಗಳಿಗೆ ತುಂಬಿದ ಸದಸ್ಯರನ್ನು ಹೊರತುಪಡಿಸಿ) 19ನೇ ಪ್ರಕರಣದ ಮೇರೆಗೆ ಸದಸ್ಯರ ಪಟ್ಟಿಯನ್ನು ಪ್ರಕಟಿಸಿದ ದಿನದ ನಂತರದ ದಿನದಂದು ಪ್ರಾರಂಭವಾಗುವ ಮೂರು ವರ್ಷಗಳಾಗಿರತಕ್ಕದ್ದು.

(2) ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯವಾಗಬೇಕಾದ ಭತ್ಯೆಗಳು ಮತ್ತು ಅವರ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**21. ಅಧ್ಯಕ್ಷ.–** (1) 19ನೇ ಪ್ರಕರಣದ ಮೇರೆಗೆ ರಾಜ್ಯ ಸಮಿತಿಯ ಸದಸ್ಯರ ಹೆಸರುಗಳನ್ನು ಪ್ರಕಟಿಸಿದ ನಂತರ, ರಾಜ್ಯ ಸರ್ಕಾರವು, ರಾಜ್ಯ ಸಮಿತಿಯ ಮೊದಲ ಸಭೆಯನ್ನು ನಲವತ್ತೈದು ದಿನಗಳೊಳಗೆ ಕರೆಯತಕ್ಕದ್ದು, ಆ ಸಭೆಯಲ್ಲಿ ರಾಜ್ಯ ಸಮಿತಿಯು ಅದರ ಸದಸ್ಯರ ಪೈಕಿ ಅಧ್ಯಕ್ಷನನ್ನು ಚುನಾಯಿಸತಕ್ಕದ್ದು:

ಪರಂತು, ಪದನಿಮಿತ್ತ ಸದಸ್ಯರು ಅಧ್ಯಕ್ಷನ ಚುನಾವಣೆಯಲ್ಲಿ ಭಾಗವಹಿಸತಕ್ಕದ್ದಲ್ಲ.

(2) ರಾಜ್ಯ ಸಮಿತಿಯು ಅಧ್ಯಕ್ಷನನ್ನು ಚುನಾಯಿಸಲು ವಿಫಲವಾದರೆ, ರಾಜ್ಯ ಸರ್ಕಾರವು ರಾಜ್ಯ ಸಮಿತಿಯ ಒಬ್ಬ ಸದಸ್ಯನನ್ನು ಅದರ ಅಧ್ಯಕ್ಷನನ್ನಾಗಿ ನೇಮಕ ಮಾಡಬಹುದು.

(3) ಅಧ್ಯಕ್ಷನು ಚುನಾಯಿತನಾಗಿರುವುದನ್ನು ರಾಜ್ಯ ಸರ್ಕಾರವು ರಾಜ್ಯದ ರಾಜ್ಯಪತ್ರದಲ್ಲಿ ಅಧಿಸೂಚಿಸತಕ್ಕದ್ದು.

(4) ಅಧ್ಯಕ್ಷನ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಯಾರೇ ವ್ಯಕ್ತಿಯು ಎರಡಕ್ಕಿಂತ ಹೆಚ್ಚು ನಿರಂತರ ಅವಧಿಗಳಿಗೆ ಅಧ್ಯಕ್ಷನ ಪದವನ್ನು ಹೊಂದಿರತಕ್ಕದ್ದಲ್ಲ.

(5) ಅಧ್ಯಕ್ಷನ ಪದದಲ್ಲಿನ ಯಾವುದೇ ಆಕಸ್ಮಿಕ ಖಾಲಿಸ್ಥಾನವನ್ನು (1)ನೇ ಉಪಪ್ರಕರಣಕ್ಕೆ ಅಥವಾ ಸಂದರ್ಭಾನುಸಾರ (2)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಭರ್ತಿಮಾಡತಕ್ಕದ್ದು.

**22. ರಾಜ್ಯ ಸಮಿತಿಯ ಪುನರ್‌ರಚನೆ.–** (1) ರಾಜ್ಯ ಸರ್ಕಾರವು, ರಾಜ್ಯ ಸಮಿತಿಯ ಅವಧಿಯು ಮುಕ್ತಾಯಕ್ಕೆ ಕನಿಷ್ಠ ನಾಲ್ಕು ತಿಂಗಳುಗಳಿಗೆ ಮುಂಚೆ ಹೊಸ ರಾಜ್ಯ ಸಮಿತಿಯ ಪುನರ್‌ರಚನೆಗೆ ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಅಥವಾ ತೆಗೆದುಕೊಳ್ಳುವಂತೆ ಮಾಡತಕ್ಕದ್ದು.

(2) ಹೊರಹೋಗುತ್ತಿರುವ ಸದಸ್ಯನು, ಎರಡಕ್ಕಿಂತ ಹೆಚ್ಚಿಲ್ಲದ ಅವಧಿಗಳಿಗೆ ರಾಜ್ಯ ಸಮಿತಿಗೆ ಪುನರ್ ನಾಮನಿರ್ದೇಶನಗೊಳ್ಳಲು ಅರ್ಹನಾಗಿರತಕ್ಕದ್ದು:

ಪರಂತು, ನಾಮನಿರ್ದೇಶಿತರ ಪೈಕಿ ಶೇಕಡ ಐವತ್ತರಷ್ಟು ನಾಮನಿರ್ದೇಶತರನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಎರಡನೇ ಅವಧಿಗೆ ಪುನರ್ ನಾಮನಿರ್ದೇಶನ ಮಾಡಬಹುದು.

**23. ಸಮಿತಿಯ ಸದಸ್ಯನಾಗಿ ನಾಮನಿರ್ದೇಶಿತನಾಗುವುದಕ್ಕೆ ಅಥವಾ ಮುಂದುವರಿಯುವುದಕ್ಕೆ ಅನರ್ಹತೆ.–** ಯಾರೇ ವ್ಯಕ್ತಿಯು, ಅವನು,–

(i) ಭಾರತದ ನಾಗರಿಕನಾಗಿರದಿದ್ದರೆ;

(ii) ಆ ರಾಜ್ಯದ ನಿವಾಸಿಯಾಗಿರದಿದ್ದರೆ;

(iii) 18ನೇ ಪ್ರಕರಣದ (1)ನೇ ಉಪಪ್ರಕರಣದ (vi) ಖಂಡದಲ್ಲಿ ಉಪಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿಯನ್ನು ಹೊರತುಪಡಿಸಿ, ಮುಸ್ಲಿಂ ಆಗಿರದಿದ್ದರೆ;

(iv) ಇಪ್ಪತ್ತೈದು ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವನಾಗಿದ್ದರೆ;

(v) ಅಸ್ವಸ್ಥ ಮನಸ್ಸಿನವನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ;

(vi) ಅವಿಮುಕ್ತ ದಿವಾಳಿಯಾಗಿದ್ದರೆ;

(vii) ನೈತಿಕ ಅಧಃಪತನವನ್ನೊಳಗೊಂಡ ಅಪರಾಧದಲ್ಲಿ ನಿರ್ಣೀತ ಅಪರಾಧಿಯೆಂದು ನಿರ್ಣೀತನಾಗಿದ್ದಾನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ;

(viii) ಹಿಂದಿನ ಸಂದರ್ಭದಲ್ಲಿ,-

(ಎ) ಸದಸ್ಯ ಪದದಿಂದ ಅವನನ್ನು ತೆಗೆದು ಹಾಕಿದ್ದರೆ; ಅಥವಾ

(ಬಿ) ತೀರ್ಥ ಯಾತ್ರಿಕರ ಹಿತಾಸಕ್ತಿಗನುಸಾರ ಕಾರ್ಯನಿರ್ವಹಿಸದಿದುದ್ದಕ್ಕಾಗಿ ಅಥವಾ ಭ್ರಷ್ಟಾಚಾರಕ್ಕಾಗಿ ಸಕ್ಷಮ ಪ್ರಾಧಿಕಾರದ ಆದೇಶದ ಮೂಲಕ ಅವನನ್ನು ತೆಗೆದುಹಾಕಿದ್ದರೆ

– ರಾಜ್ಯ ಸಮಿತಿಯ ಸದಸ್ಯನಾಗಿ ನಾಮನಿರ್ದೇಶಿತನಾಗುವುದಕ್ಕೆ ಅಥವಾ ಮುಂದುವರಿಯುವುದಕ್ಕೆ ಅನರ್ಹನಾಗಿರತಕ್ಕದ್ದು.

**24. ಅಧ್ಯಕ್ಷನ ಮತ್ತು ಸದಸ್ಯರ ರಾಜೀನಾಮೆ.–** ಅಧ್ಯಕ್ಷನು ಅಥವಾ ಯಾರೇ ಇತರ ಸದಸ್ಯನು ತಾನು ಸಹಿ ಮಾಡಿದ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ಆ ರಾಜೀನಾಮೆಯು ನೀಡಿದ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು.

**25. ಅಧ್ಯಕ್ಷನನ್ನು ಮತ್ತು ಸದಸ್ಯರನ್ನು ತೆಗೆದುಹಾಕುವುದು.–** (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ರಾಜ್ಯ ಸಮಿತಿಯ ಅಧ್ಯಕ್ಷನನ್ನು ಅಥವಾ ಅದರ ಯಾರೇ ಸದಸ್ಯನನ್ನು, ಅವನು,-

(i) 23ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳಿಗೆ ಒಳಗಾಗಿದ್ದರೆ ಅಥವಾ ಒಳಗಾದರೆ; ಅಥವಾ

(ii) ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾಗಿದ್ದರೆ ಅಥವಾ ಅವನು ನೀಡಬಹುದಾದಂಥ ಯಾವುದೇ ವಿವರಣೆಯನ್ನು ಆಲಿಸಿದ ನಂತರ, ರಾಜ್ಯ ಸಮಿತಿಯ ಹಿತಾಸಕ್ತಿಗಳಿಗೆ ಅಥವಾ ತೀರ್ಥ ಯಾತ್ರಿಕರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗುವುದೆಂದು ರಾಜ್ಯ ಸರ್ಕಾರವು ಪರಿಗಣಿಸುವಂಥ ರೀತಿಯಲ್ಲಿ ಕಾರ್ಯನಿರ್ವಹಿಸಿದರೆ; ಅಥವಾ

(iii) ಸಾಕಷ್ಟು ಕಾರಣವಿಲ್ಲದೆ ರಾಜ್ಯ ಸಮಿತಿಯ ಮೂರು ನಿರಂತರ ಸಭೆಗಳಿಗೆ ಹಾಜರಾಗಲು ವಿಫಲನಾಗಿದ್ದಾನೆಂದು ರಾಜ್ಯದ ಸಮಿತಿಯು ಅಭಿಪ್ರಾಯಪಟ್ಟರೆ

– ತೆಗೆದುಹಾಕಬಹುದು.

(2) ರಾಜ್ಯ ಸಮಿತಿಯ ಅಧ್ಯಕ್ಷನನ್ನು (1)ನೇ ಉಪಪ್ರಕರಣದ ಮೇರೆಗೆ ತೆಗೆದುಹಾಕಿದಲ್ಲಿ, ಅವನು ರಾಜ್ಯ ಸಮಿತಿಯ ಸದಸ್ಯನಾಗಿರುವುದೂ ಸಹ ನಿಂತಹೋಗತಕ್ಕದ್ದು.

**26. ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವುದು.–** (1) ಸದಸ್ಯನ ಸ್ಥಾನವು, ಅವನನ್ನು ತೆಗೆದುಹಾಕುವುದರಿಂದ, ಅವನ ರಾಜೀನಾಮೆಯಿಂದ, ಮರಣದಿಂದ ಅನ್ಯಥಾ ಖಾಲಿಯಾದಾಗ, ಹೊಸ ಸದಸ್ಯನನ್ನು ಆತನ ಸ್ಥಾನದಲ್ಲಿ ನಾಮನಿರ್ದೇಶಿಸತಕ್ಕದ್ದು ಮತ್ತು ಅಂತಹ ಸದಸ್ಯನು, ಯಾವ ಸದಸ್ಯನ ಸ್ಥಾನವನ್ನು ಅವನು ತುಂಬುವನೋ ಆ ಸದಸ್ಯನ ಸ್ಥಾನವು ಖಾಲಿಯಾಗಿರದಿದ್ದರೆ ಎಷ್ಟು ಕಾಲದವರೆಗೆ ಪದಧಾರಣ ಮಾಡಲು ಆ ಸದಸ್ಯನು ಹಕ್ಕುಳ್ಳವನಾಗಿರುತ್ತಿದ್ದನೋ ಅಷ್ಟು ಕಾಲದವರೆಗೆ ಪದಧಾರಣ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗಿನ ಯಾವುದೇ ಆಕಸ್ಮಿಕ ಖಾಲಿಸ್ಥಾನವನ್ನು ಹಿಂದಿನ ಸದಸ್ಯನು ಯಾವ ಪ್ರವರ್ಗಕ್ಕೆ ಸೇರಿದ್ದನೋ ಅದೇ ಪ್ರವರ್ಗದವರಿಂದ ಭರ್ತಿಮಾಡತಕ್ಕದ್ದು.

**27. ರಾಜ್ಯ ಸಮಿತಿಯ ಕರ್ತವ್ಯಗಳು.–** (1) ಹಜ್ ಯಾತ್ರಿಕರ ಹಿತದೃಷ್ಟಿಯಿಂದ ಸಮಿತಿಯ ನೀತಿಯನ್ನು ಮತ್ತು ನಿರ್ದೇಶನಗಳನ್ನು ಅನುಷ್ಠಾನಗೊಳಿಸುವುದು ರಾಜ್ಯ ಸಮಿತಿಯ ಕರ್ತವ್ಯವಾಗಿರತಕ್ಕದ್ದು.

(2) ರಾಜ್ಯ ಸಮಿತಿಯು ಹಜ್ ಯಾತ್ರಿಕರಿಗೆ ಅವರ ಸ್ವಂತ ರಾಜ್ಯಗಳ ಮತ್ತು ಭಾರತದಿಂದ ನಿರ್ಗಮಿಸುವ ಸ್ಥಳದ ನಡುವೆ ಅವರ ಪ್ರಯಾಣಕ್ಕೆ ವ್ಯವಸ್ಥೆ ಮತ್ತು ನಿರ್ಗಮಿಸುವ ಸ್ಥಳಗಳಲ್ಲಿ ಅವರಿಗೆ ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡುವ ವಿಷಯವೂ ಸೇರಿದಂತೆ ಅವರಿಗೆ ನೆರವನ್ನು ಒದಗಿಸತಕ್ಕದ್ದು.

(3) ರಾಜ್ಯ ಸಮಿತಿಯು, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ, ಸಂಬಂಧಪಟ್ಟ ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಹಜ್‌ಗೆ ಸಂಬಂಧಪಟ್ಟಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**28. ರಾಜ್ಯ ಸಮಿತಿಯ ಸಭೆಗಳು.–** (1) ರಾಜ್ಯ ಸಮಿತಿಯು ಹಜ್ ದಿನಕ್ಕೆ ಮುಂಚೆ ಮತ್ತು ಹಜ್ ಮುಗಿದ ಮೇಲೆ ವರ್ಷದಲ್ಲಿ ಕನಿಷ್ಠ ಎರಡು ಸಲ ಸಭೆ ಸೇರತಕ್ಕದ್ದು.

(2) ರಾಜ್ಯ ಸಮಿತಿಯ ಯಾವುದೇ ಸಭೆಯಲ್ಲಿ ಕೋರಂ ಆಗುವುದಕ್ಕೆ ಅಗತ್ಯವಾದ ಸದಸ್ಯರ ಸಂಖ್ಯೆಯು ಅದರ ಸದಸ್ಯರ ಮೂರನೇ ಒಂದು ಭಾಗ ಆಗಿರತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಭೆಗಳ ಜೊತೆಗೆ ರಾಜ್ಯ ಸಮಿತಿಯು, ಕನಿಷ್ಠ ಮೂರನೇ ಒಂದು ಭಾಗದಷ್ಟು ಸದಸ್ಯರು ಕೋರಿದಾಗ ಅಥವಾ ಅಧ್ಯಕ್ಷನು ಅವಶ್ಯವೆಂದು ಪರಿಗಣಿಸಿದಾಗ ಸಭೆಗಳನ್ನು ನಡೆಸಬಹುದು.

(4) ಎಲ್ಲ ವಿಷಯಗಳನ್ನು ಹಾಜರಿರುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಸಮಸಮ ಮತಗಳು ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅಧ್ಯಕ್ಷತೆ ವಹಿಸಿರುವ ಇತರ ವ್ಯಕ್ತಿಯು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**29. ರಾಜ್ಯ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ನೌಕರರು.–** (1) ರಾಜ್ಯ ಸರ್ಕಾರವು, ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ತನ್ನ ಅಧಿಕಾರಿಗಳ ಪೈಕಿ ಒಬ್ಬನನ್ನು ರಾಜ್ಯ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ ಮಾಡತಕ್ಕದ್ದು:

ಪರಂತು, ಹಾಗೆ ನೇಮಕಗೊಂಡ ವ್ಯಕ್ತಿಯು ಸಾಮಾನ್ಯವಾಗಿ ಮುಸ್ಲಿಂ ಆಗಿರತಕ್ಕದ್ದು.

(2) ರಾಜ್ಯ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿಯು ಅದರ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(3) ಕಾರ್ಯನಿರ್ವಾಹಕ ಅಧಿಕಾರಿಯು ರಾಜ್ಯ ಸಮಿತಿಯ ತೀರ್ಮಾನಗಳನ್ನು ಕಾರ್ಯಗತಗೊಳಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು:

ಪರಂತು, ಕಾರ್ಯನಿರ್ವಾಹಕ ಅಧಿಕಾರಿಯ ಮತ್ತು ರಾಜ್ಯ ಸಮಿತಿಯ ನಡುವೆ ಯಾವುದೇ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ ಅವನು ಆ ವಿಷಯವನ್ನು ರಾಜ್ಯ ಸರ್ಕಾರದ ಗಮನಕ್ಕೆ ತರತಕ್ಕದ್ದು. ಆ ಬಗ್ಗೆ ಅದರ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(4) ರಾಜ್ಯ ಸಮಿತಿಯು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆದು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ಅಗತ್ಯವೆಂದು ಪರಿಗಣಿಸಬಹುದಾದಂಥ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನಿಯೋಜಿಸಿಕೊಳ್ಳತಕ್ಕದ್ದು.

(5) ಅಧಿಕಾರಿಗಳ ಮತ್ತು ಇತರ ನೌಕರರ ಪದಾವಧಿಯು ಮತ್ತು ಸೇವಾ ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರಗತಕ್ಕದ್ದು.

## ಅಧ್ಯಾಯ – IV

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**30. ಕೇಂದ್ರ ಹಜ್ ನಿಧಿ.–** ಸಮಿತಿಯು, ಕೇಂದ್ರ ಹಜ್ ನಿಧಿ ಎಂದು ಕರೆಯಲಾಗುವ ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಈ ಮುಂದಿನ ಮೊಬಲಗುಗಳನ್ನು ಅದಕ್ಕೆ ಜಮೆ ಮಾಡತಕ್ಕದ್ದು, ಎಂದರೆ:–

(ಎ) (i) ಹಜ್‌ಗೆ ಅರ್ಜಿಗಳ ನೋಂದಣಿಗಾಗಿ; ಮತ್ತು

(ii) ಹಜ್ ಯಾತ್ರಿಕ ಪ್ರಯಾಣ ಪಾಸುಗಳ ನೀಡಿಕೆಗಾಗಿ

– ಸಮಿತಿಯು ವಿಧಿಸಬಹುದಾದ ಯಾವುದೇ ಫೀಜುಗಳಿಂದ ಮತ್ತು ಸೇವಾ ಶುಲ್ಕಗಳಿಂದ ಪ್ರಾಪ್ತವಾದ ಮೊಬಲಗುಗಳು;

(ಬಿ) ಹಜ್ ಯಾತ್ರೆ ಕೈಗೊಳ್ಳುವುದಕ್ಕಾಗಿ ತೀರ್ಥ ಯಾತ್ರಿಕರಿಂದ ಸಂಗ್ರಹಿಸಿದ ಹಣ;

(ಸಿ) ಸಮಿತಿಯ ನಿಧಿಗಳಿಂದ ಮಾಡಿದ ಎಲ್ಲ ಠೇವಣಿಗಳಿಂದ ಮತ್ತು ಹೂಡಿಕೆಗಳಿಂದ ಬಂದ ಆದಾಯ;

(ಡಿ) ಮೃತ ತೀರ್ಥ ಯಾತ್ರಿಕರ ಸಾಮಾನುಗಳ ಮಾರಾಟದಿಂದ ಗಳಿಸಿದ ಮೊಬಲಗುಗಳು ಮತ್ತು ಅವರು ಬಿಟ್ಟುಹೋದ, ಕ್ಲೇಮು ಮಾಡದ ಮತ್ತು ಕೇಂದ್ರ ಸರ್ಕಾರದ ವಶಕ್ಕೆ ಬಂದ ಹಣದ ಮೊಬಲಗುಗಳು;

(ಇ) ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಸರ್ಕಾರದಿಂದ ಅನುಮೋದಿತವಾದ ಯಾವುದೇ ಇತರ ಮೂಲದಿಂದ ಸಾಲವಾಗಿ ಪಡೆದ ಯಾವುದೇ ಮೊಬಲಗುಗಳು;

(ಎಫ್) ಸಮಿತಿಗೆ ಯಾವುದೇ ಮೂಲದಿಂದ ಕಾನೂನುಬದ್ಧವಾಗಿ ಬರಬಹುದಾದ ಯಾವುದೇ ಮೊಬಲಗು; ಮತ್ತು

(ಜಿ) ಈ ಅಧಿನಿಯಮದ ಪ್ರಾರಂಭದಲ್ಲಿ ಹಜ್ ನಿಧಿಯ ಅಥವಾ ಹಜ್ ಸಮಿತಿ ಅಧಿನಿಯಮ, 1959 (1959ರ 51)ರ ಮೇರೆಗೆ ಸ್ಥಾಪಿತವಾದ ನಿರ್ಧನಿಕ ತೀರ್ಥ ಯಾತ್ರಿಕರ ನಿಧಿಯ ಲೆಕ್ಕದಲ್ಲಿರುವ ಮೊಬಲಗು;

**31. ಕೇಂದ್ರ ಹಜ್ ನಿಧಿಯ ವಿನಿಯೋಗ.**– ಕೇಂದ್ರ ಹಜ್ ನಿಧಿಯು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಸಮಿತಿಯ ನಿಯಂತ್ರಣದಲ್ಲಿ ಮತ್ತು ವ್ಯವಸ್ಥಾಪನೆಯಲ್ಲಿ ಇರತಕ್ಕದ್ದು ಮತ್ತು ಈ ಮುಂದಿನ ಉದ್ದೇಶಗಳಿಗಾಗಿ ಅದನ್ನು ವಿನಿಯೋಗಿಸತಕ್ಕದ್ದು, ಎಂದರೆ:–

(ಎ) ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮತ್ತು ಇತರ ನೌಕರರ ವೇತನ ಮತ್ತು ಭತ್ಯೆಗಳು;

(ಬಿ) 9ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗೆ ಪ್ರಾಸಂಗಿಕವಾದ ಚಾರ್ಜುಗಳ ಮತ್ತು ವೆಚ್ಚಗಳ ಸಂದಾಯ; ಮತ್ತು

(ಸಿ) ಕೇಂದ್ರ ಸರ್ಕಾರವು ಅನುಮೋದಿಸಿದಂತೆ, ಸಮಿತಿಯು ಅಥವಾ ರಾಜ್ಯ ಸಮಿತಿಯು ಭರಿಸಲೇಬೇಕಾದಂಥ ಯಾವುದೇ ಇತರ ವೆಚ್ಚಗಳು.

**32. ರಾಜ್ಯ ಹಜ್ ನಿಧಿ.**– ರಾಜ್ಯ ಸಮಿತಿಯು, ರಾಜ್ಯ ಹಜ್ ನಿಧಿಯೆಂದು ಕರೆಯಲಾಗುವ ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಈ ಕೆಳಗಿನ ಮೊಬಲಗುಗಳನ್ನು ಅದಕ್ಕೆ ಜಮೆ ಮಾಡತಕ್ಕದ್ದು, ಎಂದರೆ:–

(i) ನಿಧಿಗೆ ಸಂದಾಯವಾದ ಹಣದ ಎಲ್ಲ ಮೊಬಲಗುಗಳು ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ಸಮಿತಿಯು ನೀಡಿದ ಯಾವುದೇ ಅನುದಾನ;

(ii) ರಾಜ್ಯ ಸರ್ಕಾರವು ಅನುಮೋದಿಸಿದಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದಿಂದ ಅಥವಾ ಯಾವುದೇ ಇತರ ಮೂಲದಿಂದ ರಾಜ್ಯ ಸಮಿತಿಗೆ ನೀಡಬಹುದಾದ ಯಾವುದೇ ಅನುದಾನ ಅಥವಾ ಸಾಲ;

(iii) ಯಾವುದೇ ಮೂಲದಿಂದ ರಾಜ್ಯ ಸಮಿತಿಗೆ ಕಾನೂನುಬದ್ಧವಾಗಿ ಬರಬಹುದಾದ ಯಾವುದೇ ಮೊಬಲಗು; ಮತ್ತು

(iv) ಈ ಅಧಿನಿಯಮದ ಪ್ರಾರಂಭದಲ್ಲಿ ರಾಜ್ಯ ಹಜ್ ಸಮಿತಿಯ ಲೆಕ್ಕದಲ್ಲಿ ಇರುವ ಹಣ, ಯಾವುದಾದರು ಇದ್ದರೆ.

**33. ರಾಜ್ಯ ಹಜ್ ನಿಧಿಯ ವಿನಿಯೋಗ.–** ರಾಜ್ಯ ಹಜ್ ನಿಧಿಯು, ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುದೇ ನಿಯಮಗಳಿಗೆ ಒಳಪಟ್ಟು ರಾಜ್ಯ ಸಮಿತಿಯ ನಿಯಂತ್ರಣದಲ್ಲಿ ಮತ್ತು ವ್ಯವಸ್ಥಾಪನೆಯಲ್ಲಿ ಇರತಕ್ಕದ್ದು ಮತ್ತು ಈ ಮುಂದಿನ ಉದ್ದೇಶಗಳಿಗೆ ಅದನ್ನು ವಿನಿಯೋಗಿಸತಕ್ಕದ್ದು, ಎಂದರೆ:-

(i) ರಾಜ್ಯ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಹೊರತುಪಡಿಸಿ, ಅದರ ನೌಕರರ ವೇತನ ಮತ್ತು ಭತ್ಯೆಗಳು ಕಾರ್ಯನಿರ್ವಾಹಕ ಅಧಿಕಾರಿಯ ವೇತನ ಮತ್ತು ಭತ್ಯೆಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು;

(ii) 27ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ರಾಜ್ಯ ಸಮಿತಿಯು ತನ್ನ ಕರ್ತವ್ಯಗಳನ್ನು ಯುಕ್ತವಾಗಿ ನೆರವೇರಿಸಲು ಪ್ರಾಸಂಗಿಕವಾದ ಚಾರ್ಜುಗಳ ಮತ್ತು ವೆಚ್ಚಗಳ ಸಂದಾಯ; ಮತ್ತು

(iii) ರಾಜ್ಯ ಸರ್ಕಾರವು ಅನುಮೋದಿಸಿದಂತೆ, ರಾಜ್ಯ ಸಮಿತಿಯು ಭರಿಸಲೇಬೇಕಾದ ಯಾವುದೇ ಇತರ ವೆಚ್ಚಗಳು.

**34. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಸಮಿತಿಯು ಮತ್ತು ಪ್ರತಿಯೊಂದು ರಾಜ್ಯ ಸಮಿತಿಯು, ಸಂದರ್ಭಾನುಸಾರ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಸೂಕ್ತ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರಣ ಪಟ್ಟಿಯನ್ನು ತಯಾರಿಸತಕ್ಕದ್ದು.

(2) ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು ಅನುಮೋದಿಸಬಹುದಾದಂಥ ಲೆಕ್ಕಪರಿಶೋಧಕರು, ಪ್ರತಿವರ್ಷ ಲೆಕ್ಕಪತ್ರಗಳನ್ನು ಪರಿಶೀಲಿಸತಕ್ಕದ್ದು ಮತ್ತು ಪರಿಶೋಧಿಸತಕ್ಕದ್ದು.

(3) ಲೆಕ್ಕಪರಿಶೋಧಕನು ಪ್ರಮಾಣೀಕರಿಸಿದ ಸಮಿತಿಯ ಅಥವಾ ರಾಜ್ಯ ಸಮಿತಿಯ ಲೆಕ್ಕಪತ್ರಗಳನ್ನು ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರಕ್ಕೆ ಸದರಿ ಸಮಿತಿಯು ಪ್ರತಿ ವರ್ಷ ಕಳುಹಿಸತಕ್ಕದ್ದು.

(4) ಕೇಂದ್ರ ಸರ್ಕಾರವು, (3)ನೇ ಉಪಪ್ರಕರಣದ ಮೇರೆಗೆ ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದನ್ನು ಮಂಡಿಸುವಂತೆ ಮಾಡತಕ್ಕದ್ದು.

(5) ರಾಜ್ಯ ಸರ್ಕಾರವು, (3)ನೇ ಉಪಪ್ರಕರಣದ ಮೇರೆಗೆ ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ನಂತರ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಮುಂದೆ ಅದನ್ನು ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ – V

## ಸಂಕೀರ್ಣ

**35. ತೀರ್ಥಯಾತ್ರಿಕ ಪಾಸುಗಳನ್ನು ನೀಡುವುದಕ್ಕೆ ಮತ್ತು ಫೀಜುಗಳನ್ನು ವಿಧಿಸುವುದಕ್ಕೆ ಸಮಿತಿಯ ಅಧಿಕಾರ.–** (1) ಸಮಿತಿಯು, ಸೌದಿ ಅರೇಬಿಯಾಕ್ಕೆ ನೈಜ ತೀರ್ಥಯಾತ್ರಿಕನಾಗಿ ಭಾರತದಿಂದ ಹೊರಡಲು ಹಜ್ ಯಾತ್ರಿಕರಿಗೆ "ತೀರ್ಥಯಾತ್ರಿಕ ಪಾಸ್" ಎಂದು ಕರೆಯಲಾಗುವ ಪ್ರಯಾಣ ದಸ್ತಾವೇಜನ್ನು ನೀಡುವ ಅಧಿಕಾರವನ್ನು

ಹೊಂದಿರತಕ್ಕದ್ದು ಮತ್ತು ಸದರಿ ತೀರ್ಥಯಾತ್ರಿಕನು ಪಾಸ್‌ಪೋರ್ಟ್‌ಗಳ ಅಧಿನಿಯಮ, 1967 (1967ರ 15)ರ 3ನೇ ಪ್ರಕರಣದ ಉಪಬಂಧಗಳಿಂದ ವಿನಾಯಿತಿ ಪಡೆದಿರುವುದಾಗಿ ಭಾವಿಸತಕ್ಕದ್ದು.

(2) ಪಾಸ್‌ಪೋರ್ಟ್‌ಗಳ ಅಧಿನಿಯಮ, 1967 (1967ರ 15) ರಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು, ಸಮಿತಿಯೊಂದಿಗೆ ಸಮಾಲೋಚಿಸಿ, ಹಜ್ ತೀರ್ಥಯಾತ್ರಿಕರ ನೋಂದಣಿಗೆ, ಸಮಿತಿಯು ತೀರ್ಥಯಾತ್ರಿಕ ಪಾಸನ್ನು ನೀಡುವುದಕ್ಕೆ ಮತ್ತು ಇತರ ಸಂಬಂಧಿತ ವಿಷಯಗಳಿಗೆ ಅಂಥ ಸೇವೆಗಳನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ, ನಿಯಮಿಸಬಹುದಾದಂಥ ಫೀಜಗಳನ್ನು ವಿಧಿಸಬಹುದು.

**36. ಸಮಿತಿಯ ರದ್ದಿಯಾತಿ.**– (1) ಸಮಿತಿಯು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತನಗೆ ವಿಧಿಸಿದ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥವಾಗಿದೆ ಎಂದು ಅಥವಾ ಆ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಪದೇ ಪದೇ ತಪ್ಪಿದೆ ಎಂದು ಅಥವಾ ತನ್ನ ಅಧಿಕಾರಗಳನ್ನು ಮೀರಿದೆ ಎಂದು ಅಥವಾ ದುರುಪಯೋಗಪಡಿಸಿಕೊಂಡಿದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಕೇಂದ್ರ ಸರ್ಕಾರವು ಸಮಿತಿಯನ್ನು ರದ್ದುಪಡಿಸುವುದಕ್ಕೆ ಇರುವ ಕಾರಣಗಳ ವಿವರಣಾ ಪತ್ರದೊಂದಿಗೆ ಆದೇಶವನ್ನು ರಾಜಪತ್ರದಲ್ಲಿ ಪ್ರಕಟಿಸುವ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಅವಧಿಗೆ ಸಮಿತಿಯನ್ನು ರದ್ದುಪಡಿಸಬಹುದು:

ಪರಂತು, ಮೇಲೆ ಹೇಳಿದಂತೆ ರದ್ದಿಯಾತಿಯ ಆದೇಶವನ್ನು ಮಾಡುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು ಸಮಿತಿಯನ್ನು ಏಕೆ ರದ್ದು ಮಾಡಬಾರದೆಂಬುದಕ್ಕೆ ಕಾರಣವನ್ನು ತೋರಿಸಲು ಅದಕ್ಕೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಆದೇಶದ ಮೂಲಕ ಸಮಿತಿಯನ್ನು ರದ್ದುಪಡಿಸಿದಾಗ,–

(ಎ) ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾಂಥ ದಿನಾಂಕದಂದು ಎಲ್ಲ ಸದಸ್ಯರು, (ಡಿ) ಖಂಡದ ಮೇರೆಗೆ ನಾಮನಿರ್ದೇಶನಗೊಳ್ಳಲು ತಮಗಿರುವ ಅರ್ಹತೆಗೆ ಬಾಧಕವಾಗದಂತೆ ತಮ್ಮ ತಮ್ಮ ಸದಸ್ಯ ಪದಗಳನ್ನು ತೆರವುಗೊಳಿಸತಕ್ಕದ್ದು;

(ಬಿ) ಸಮಿತಿಯನ್ನು ರದ್ದುಪಡಿಸಿರುವ ಅವಧಿಯಲ್ಲಿ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸಮಿತಿಗೆ ಪ್ರದಾನ ಮಾಡಿದ್ದ ಎಲ್ಲ ಅಧಿಕಾರಗಳನ್ನು ಮತ್ತು ವಿಧಿಸಿದ್ದ ಎಲ್ಲ ಕರ್ತವ್ಯಗಳನ್ನು, ಈ ಬಗ್ಗೆ ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದಂತಹ ಅಧಿಕಾರಿಯು ಅಥವಾ ಪ್ರಾಧಿಕಾರಿಯು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು;

(ಸಿ) ಸಮಿತಿಯಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತು ಅದನ್ನು ಪುನರ್‌ರಚಿಸುವವರೆಗೆ, ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು;

(ಡಿ) ರದ್ದಿಯಾತಿಯ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಸಮಿತಿಯನ್ನು ಪುನರ್‌ರಚಿಸುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ನಾಮನಿರ್ದೇಶನಗಳನ್ನು ಮಾಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಮಾಡಿದ ರದ್ದಿಯಾತಿಯ ಆದೇಶವನ್ನು, ಅದಕ್ಕೆ ಕಾರಣಗಳ ವಿವರಣಪತ್ರದೊಂದಿಗೆ, ಅದನ್ನು ಮಾಡಿದ ನಂತರ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

(4) ರಾಜ್ಯ ಸಮಿತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು, ಈ ಪ್ರಕರಣದ (1), (2) ಮತ್ತು (3)ನೇ ಉಪಪ್ರಕರಣಗಳಲ್ಲಿ ತಿಳಿಸಿರುವಂತವೇ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅವುಗಳಲ್ಲಿ ತಿಳಿಸಿದ ಷರತ್ತುಗಳಿಗೆ ಮತ್ತು ಈ ಬಗ್ಗೆ ಕೇಂದ್ರ ಸರ್ಕಾರವು ನೀಡಿದ ಯಾವುದೇ ನಿರ್ದೇಶನಗಳಿಗೆ ಒಳಪಟ್ಟು ಚಲಾಯಿಸಬಹುದು ಮತ್ತು ನಿರ್ವಹಿಸಬಹುದು.

**37. ಸಮಿತಿಯ ಅಥವಾ ರಾಜ್ಯ ಸಮಿತಿಯ ಸದಸ್ಯತ್ವವು ಲಾಭದಾಯಕ ಹುದ್ದೆ ಆಗಿರುವುದಿಲ್ಲ.**– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸಮಿತಿಯ ಅಥವಾ ರಾಜ್ಯ ಸಮಿತಿಯ ಸದಸ್ಯರ ಪದವನ್ನು ಲಾಭದಾಯಕ ಹುದ್ದೆ ಎಂದು ಭಾವಿಸತಕ್ಕದ್ದಲ್ಲ.

**38. ಖಾಲಿಸ್ಥಾನಗಳು, ಇತ್ಯಾದಿ ಸಮಿತಿಯ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.**– ಸಂದರ್ಭಾನುಸಾರ, ಸಮಿತಿಯ ಅಥವಾ ರಾಜ್ಯ ಸಮಿತಿಯ ಅಥವಾ ಜಂಟಿ ರಾಜ್ಯ ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು, ಅದರ ಸದಸ್ಯರಲ್ಲಿ ಯಾವುದೇ ಖಾಲಿಸ್ಥಾನ ಇರುವುದರ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನ್ಯತೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**39. ಸಮಿತಿಯ ಅಧಿಕಾರಿಗಳು ಮತ್ತು ನೌಕರರು ಲೋಕನೌಕರರಾಗಿರುವುದು.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಲು ಕ್ರಮಬದ್ಧವಾಗಿ ನೇಮಕಗೊಂಡ ಸಮಿತಿಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಮತ್ತು ಇತರ ವ್ಯಕ್ತಿಗಳನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**40. ರಕ್ಷಣೆ.**– ಸಂದರ್ಭಾನುಸಾರ, ಕೇಂದ್ರ ಅಥವಾ ರಾಜ್ಯ ಸರ್ಕಾರದ ಪೂರ್ವ ಅನುಮತಿಯನ್ನು ಪಡೆದ ಹೊರತು, ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸಮಿತಿಯ ಅಥವಾ ರಾಜ್ಯ ಸಮಿತಿಯ ಅಧ್ಯಕ್ಷನ, ಉಪಾಧ್ಯಕ್ಷರುಗಳ ಅಥವಾ ಯಾರೇ ಸದಸ್ಯನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**41. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.**– ಅನುಸೂಚಿಯನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ ಅದು ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ ಹಾಗೆ ಮಾಡಬಹುದು ಮತ್ತು ಆನಂತರ ಅನುಸೂಚಿಯು ತದನುಸಾರವಾಗಿ ತಿದ್ದುಪಡಿಯಾಗಿದೆಯೆಂದು ಭಾವಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಹೊರಡಿಸದ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**42. ಕುಂದುಕೊರತೆಗಳ ನಿವಾರಣೆ.**– ಹಜ್ ಸಮಿತಿಯು ಅಥವಾ ರಾಜ್ಯ ಹಜ್ ಸಮಿತಿಯು ನೆರವೇರಿಸಿದ ಯಾವುದೇ ಕರ್ತವ್ಯಗಳ ನಿರ್ವಹಣೆಯಲ್ಲಿ ಬಾಧಿತನಾದ ಯಾರೇ ಹಜ್ ತೀರ್ಥ ಯಾತ್ರಿಕನು, ಸಂದರ್ಭಾನುಸಾರ, ಹಜ್ ಸಮಿತಿಗೆ ಅಥವಾ ರಾಜ್ಯ ಹಜ್ ಸಮಿತಿಗೆ ತನ್ನ ಕುಂದುಕೊರತೆಗಳ ನಿವಾರಣೆಗಾಗಿ ನಿವೇದನೆ ಮಾಡಿಕೊಳ್ಳತಕ್ಕದ್ದು ಮತ್ತು ಅವಶ್ಯವೆನಿಸಿದರೆ, ಬಾಧಿತ ವ್ಯಕ್ತಿಯ ಅಹವಾಲನ್ನು ಆಲಿಸಿದ ನಂತರ, ಸದರಿ ಸಮಿತಿಯು ಅದನ್ನು ವಿಲೇ ಮಾಡತಕ್ಕದ್ದು.

**43. ಸಮಿತಿಗಳಲ್ಲಿ ಸ್ವತ್ತುಗಳು ಮತ್ತು ಇತರ ಹಕ್ಕುಗಳು, ಇತ್ಯಾದಿ ನಿಹಿತವಾಗಿರುವುದು.-** (1) ಈ ಅಧಿನಿಯಮದ ಪ್ರಾರಂಭದಂದು ಮತ್ತು ಪ್ರಾರಂಭದಿಂದ ಹಜ್ ಸಮಿತಿ ಅಧಿನಿಯಮ, 1959 (1959ರ 51)ರ ಮೇರೆಗೆ ರಚಿತವಾದ ಮುಂಬಯಿ ಹಜ್ ಸಮಿತಿಯ ಒಡೆತನದಲ್ಲಿ, ಅಧಿಕಾರದಲ್ಲಿ ಅಥವಾ ನಿಯಂತ್ರಣದಲ್ಲಿ ಈ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ಇದ್ದಂಥ ಎಲ್ಲ ಸ್ವತ್ತುಗಳು, ಹಕ್ಕುಗಳು, ಗುತ್ತಿಗೆ ಹಿಡುವಳಿಗಳು, ಅಧಿಕಾರಗಳು, ವಿಧಾಯಕ ಅಧಿಕಾರಗಳು ಮತ್ತು ವಿಶೇಷ ಅಧಿಕಾರಗಳು ಮತ್ತು ಭೂಮಿಗಳು, ಕಟ್ಟಡಗಳು, ಉಗ್ರಾಣಗಳು, ನಗದು ಶಿಲ್ಕು, ಕೈಯಲ್ಲಿರುವ ನಗದು, ಮೀಸಲು ನಿಧಿಗಳು, ಹೂಡಿಕೆಗಳೂ ಸೇರಿದಂತೆ ಎಲ್ಲ ಚರ ಅಥವಾ ಸ್ಥಿರ ಸ್ವತ್ತುಗಳು ಮತ್ತು ಅಂತಹ ಸ್ವತ್ತುಗಳಲ್ಲಿನ ಅಥವಾ ಅಂತಹ ಸ್ವತ್ತುಗಳಿಂದ ಬರುವ ಎಲ್ಲ ಇತರ ಹಕ್ಕುಗಳು ಮತ್ತು ಹಿತಾಸಕ್ತಿಗಳು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಲೆಕ್ಕ ಪುಸ್ತಕಗಳು, ರಿಜಿಸ್ಟರುಗಳು ಮತ್ತು ಯಾವುದೇ ಸ್ವರೂಪದ ಎಲ್ಲ ಇತರ ದಸ್ತಾವೇಜುಗಳು ನಿರುಪಾಧಿಕವಾಗಿ ಸಮಿತಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಆ ಸಮಿತಿಗೆ ಸೇರತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದಂದು ಅಥವಾ ಪ್ರಾರಂಭದಿಂದ, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ರಾಜ್ಯ ಹಜ್ ಸಮಿತಿಯ ಒಡೆತನದಲ್ಲಿ, ಅಧಿಕಾರದಲ್ಲಿ ಅಥವಾ ನಿಯಂತ್ರಣದಲ್ಲಿ ಇದ್ದಂಥ ಎಲ್ಲ ಆಸ್ತಿಗಳು, ಹಕ್ಕುಗಳು, ಗುತ್ತಿಗೆ ಹಿಡುವಳಿಗಳು, ಅಧಿಕಾರಗಳು, ವಿಧಾಯಕ ಅಧಿಕಾರಗಳು ಮತ್ತು ವಿಶೇಷಾಧಿಕಾರಗಳು ಮತ್ತು ಭೂಮಿಗಳು, ಕಟ್ಟಡಗಳು, ಉಗ್ರಾಣಗಳು, ನಗದು ಶಿಲ್ಕು, ಕೈಯಲ್ಲಿರುವ ನಗದು, ಮೀಸಲು ನಿಧಿಗಳು, ಹೂಡಿಕೆಗಳೂ ಸೇರಿದಂತೆ ಎಲ್ಲ ಚರ ಮತ್ತು ಸ್ಥಿರಸ್ವತ್ತುಗಳು ಮತ್ತು ಅಂತಹ ಸ್ವತ್ತುಗಳಲ್ಲಿನ ಅಥವಾ ಅಂತಹ ಸ್ವತ್ತುಗಳಿಂದ ಬರುವ ಎಲ್ಲ ಇತರ ಹಕ್ಕುಗಳು ಮತ್ತು ಹಿತಾಸಕ್ತಿಗಳು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಲೆಕ್ಕ ಪುಸ್ತಕಗಳು, ರಿಜಿಸ್ಟರುಗಳು ಮತ್ತು ಯಾವುದೇ ಸ್ವರೂಪದ ಎಲ್ಲ ಇತರ ದಸ್ತಾವೇಜುಗಳು ನಿರುಪಾಧಿಕವಾಗಿ ರಾಜ್ಯ ಹಜ್ ಸಮಿತಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಆ ಸಮಿತಿಗೆ ಸೇರತಕ್ಕದ್ದು.

(3) ಸಮಿತಿಯ ಅಥವಾ ರಾಜ್ಯ ಸಮಿತಿಯ ಉದ್ದೇಶಗಳಿಗಾಗಿ ಅಥವಾ ಆ ಉದ್ದೇಶಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಸಮಿತಿಯು ಅಥವಾ ರಾಜ್ಯ ಸಮಿತಿಯು, ಅದರೊಂದಿಗೆ ಅಥವಾ ಅದರ ಪರವಾಗಿ ವಹಿಸಿದ ಎಲ್ಲ ಋಣಗಳನ್ನು, ಹೊಣೆಗಳನ್ನು ಮತ್ತು ಬಾಧ್ಯತೆಗಳನ್ನು, ಮಾಡಿಕೊಂಡ ಎಲ್ಲ ಕರಾರುಗಳನ್ನು ಮತ್ತು ಮಾಡಲು ನಿಶ್ಚಯಿಸಿದ ಎಲ್ಲ ವಿಷಯಗಳನ್ನು ಮತ್ತು ಕಾರ್ಯಗಳನ್ನು ಸಂದರ್ಭಾನುಸಾರ, ಸಮಿತಿಯು ಅಥವಾ ರಾಜ್ಯ ಸಮಿತಿಯು, ಅದರೊಂದಿಗೆ ಅಥವಾ ಅದರ ಪರವಾಗಿ ವಹಿಸಲಾಗಿದೆಯೆಂದು, ಮಾಡಿಕೊಳ್ಳಲಾಗಿದೆಯೆಂದು ಮತ್ತು ಮಾಡಲು ನಿಶ್ಚಯಿಸಲಾಗಿದೆಯೆಂದು ಭಾವಿಸತಕ್ಕದ್ದು.

(4) ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಸಮಿತಿಗೆ ಅಥವಾ ರಾಜ್ಯ ಸಮಿತಿಗೆ ಬರಬೇಕಾದ ಹಣದ ಎಲ್ಲ ಮೊಬಲಗುಗಳನ್ನು ಸಂದರ್ಭಾನುಸಾರ, ಸಮಿತಿಗೆ ಅಥವಾ ರಾಜ್ಯ ಸಮಿತಿಗೆ ಬರಬೇಕಾದವುಗಳೆಂದು ಭಾವಿಸತಕ್ಕದ್ದು.

(5) ಮುಂಬಯಿ ಹಜ್ ಸಮಿತಿಯ ಅಥವಾ ರಾಜ್ಯದ ಹಜ್ ಸಮಿತಿಯ ಪರವಾಗಿ ಮಾಡಿಕೊಂಡ ಎಲ್ಲ ಕರಾರುಗಳನ್ನು ಮತ್ತು ಬರೆದುಕೊಟ್ಟ ಎಲ್ಲ ಲಿಖಿತ ಪತ್ರಗಳನ್ನು ಸಮಿತಿಯ ಅಥವಾ ಸಂದರ್ಭಾನುಸಾರ ರಾಜ್ಯ ಸಮಿತಿಯ ಪರವಾಗಿ ಮಾಡಿಕೊಂಡಿರುವುದಾಗಿ ಅಥವಾ ಬರೆದುಕೊಟ್ಟಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ನೆರವೇರಿಸತಕ್ಕದ್ದು.

(6) ಈ ಅಧಿನಿಯಮದ ಪ್ರಾರಂಭದಂದು ಇತ್ಯರ್ಥದಲ್ಲಿರುವ, ಯಾವ ದಾವೆಗಳಲ್ಲಿ ಅಥವಾ ದಾವೆಗಳಿಗೆ ಮತ್ತು ಯಾವ ಕಾನೂನು ವ್ಯವಹರಣೆಗಳಲ್ಲಿ ಅಥವಾ ಕಾನೂನು ವ್ಯವಹರಣೆಗಳಿಗೆ ಮುಂಬಯಿ ಹಜ್ ಸಮಿತಿಯು ಅಥವಾ ರಾಜ್ಯದ ಹಜ್ ಸಮಿತಿಯು ಒಂದು ಪಕ್ಷಕಾರ ಆಗಿತ್ತೋ ಆ ಎಲ್ಲ ದಾವೆಗಳಲ್ಲಿ ಮತ್ತು ಕಾನೂನು ವ್ಯವಹರಣೆಗಳಲ್ಲಿ ಸಮಿತಿಯನ್ನು ಅಥವಾ ಸಂದರ್ಭಾನುಸಾರ ರಾಜ್ಯದ ಸಮಿತಿಯನ್ನು, ಅದಕ್ಕೆ ಬದಲಾಗಿ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು.

**44. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(i) 4ನೇ ಪ್ರಕರಣದ (ii)ನೇ ಖಂಡದ ಮೇರೆಗೆ ಸಮಿತಿಯ ಸದಸ್ಯರುಗಳನ್ನು ಚುನಾಯಿಸುವ ರೀತಿ;

(ii) 6ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನಿಗೆ ಮತ್ತು ಸದಸ್ಯರುಗಳಿಗೆ ಸಂಬಂಧಿಸಿದ ನಿಬಂಧನೆಗಳು ಮತ್ತು ಷರತ್ತುಗಳು;

(iii) 7ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು;

(iv) 8ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದ ಮೇರೆಗೆ ಸದಸ್ಯರನ್ನು ಪುನರ್ ನಾಮನಿರ್ದೇಶಿಸಬಹುದಾದ ರೀತಿ;

(v) 9ನೇ ಪ್ರಕರಣದ (1)ನೇ ಉಪಪ್ರಕರಣದ (ix)ನೇ ಖಂಡದ ಮೇರೆಗೆ ಹಜ್‌ಗೆ ಸಂಬಂಧಪಟ್ಟ ಕರ್ತವ್ಯಗಳು;

(vi) 16ನೇ ಪ್ರಕರಣದ ಮೇರೆಗೆ ಸಮಿತಿಯ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಯ ಪ್ರಕಾರ್ಯಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮತ್ತು ಇತರ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(vii) 18ನೇ ಪ್ರಕರಣದ (i)ನೇ ಉಪಪ್ರಕರಣದ (vi)ನೇ ಖಂಡದ ಪರಂತುಕದ ಮೇರೆಗೆ ಜಂಟಿ ರಾಜ್ಯ ಸಮಿತಿಯ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರ ಸಮಿತಿಯ ಸದಸ್ಯರ ಸಂಖ್ಯೆ;

(viii) 34ನೇ ಪ್ರಕರಣದ ಮೇರೆಗೆ ಸಮಿತಿಯು ಮತ್ತು ರಾಜ್ಯ ಸಮಿತಿಯು ಲೆಕ್ಕಪತ್ರಗಳನ್ನು ಯಾವ ರೀತಿಯಲ್ಲಿ ಇಡತಕ್ಕದ್ದೋ ಆ ರೀತಿ ಮತ್ತು ಅಂಥ ಲೆಕ್ಕಪತ್ರಗಳ ಪರಿಶೋಧನೆ;

(ix) 35ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹಜ್ ಯಾತ್ರಿಕ ಪಾಸ್ ನೀಡಿಕೆ;

(x) 41ನೇ ಪ್ರಕರಣದ ಮೇರೆಗೆ ಅಕ್ಕಪಕ್ಕದ ರಾಜ್ಯಗಳನ್ನು ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳನ್ನು ಒಳಗೊಂಡಿರುವ ವಲಯಗಳಿಗೆ ಸಂಬಂಧಿಸಿದಂತೆ ಅನುಸೂಚಿಯ ತಿದ್ದುಪಡಿ;

(xi) ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಉಭಯ ಸದನಗಳ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನವು ಅಥವಾ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**45. ಉಪವಿಧಿಗಳನ್ನು ರಚಿಸಲು ಅಧಿಕಾರ.–** (1) ಸಮಿತಿಯು, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಉಪಬಂಧಗಳಿಗೆ ಸುಸಂಗತವಾಗುವಂಥ ಉಪವಿಧಿಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು, ಎಂದರೆ:–

(i) 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು;

(ii) 9ನೇ ಪ್ರಕರಣದ (1)ನೇ ಉಪಪ್ರಕರಣದ (viii)ನೇ ಖಂಡದ ಮೇರೆಗೆ ಸಮಿತಿಯ ವ್ಯವಹರಣೆಗಳನ್ನು ಮತ್ತು ತೀರ್ಥ ಯಾತ್ರಿಕರ ಹಿತಾಸಕ್ತಿಗಳ ಯಾವುದೇ ವಿಷಯವನ್ನು ಪ್ರಕಟಿಸುವುದಕ್ಕೆ ಉಪಬಂಧ ಕಲ್ಪಿಸುವುದು;

(iii) 10ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸಮಿತಿಯ ಸಭೆಯಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಪ್ರಕ್ರಿಯಾ ನಿಯಮಗಳನ್ನು ಗೊತ್ತುಪಡಿಸುವುದು;

(iv) 11ನೇ ಪ್ರಕರಣದ ಮೇರೆಗೆ ಸ್ಥಾಯೀ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು ಉಪ ಸಮಿತಿಗಳಲ್ಲಿನ ಸದಸ್ಯರುಗಳ ಮತ್ತು ಇತರ ವ್ಯಕ್ತಿಗಳ ಸಂಖ್ಯೆಯ ನಿರ್ಧರಣೆ;

(v) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ಸಮಿತಿಯು ಅವಶ್ಯವೆಂದು ಭಾವಿಸಬಹುದಾದಂಥ ಯಾವುದೇ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದು.

(2) ಈ ಅಧಿನಿಯಮದ ಮೇರೆಗೆ ಸಮಿತಿಯು ರಚಿಸಿದ ಉಪವಿಧಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅವುಗಳನ್ನು ಸ್ಥಿರೀಕರಿಸುವವರೆಗೆ ಅವು ಜಾರಿಗೆ ಬರತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು ಸ್ಥಿರೀಕರಿಸಿದ ಉಪವಿಧಿಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

**46. ಪ್ರತ್ಯಾಯೋಜಿಸುವ ಅಧಿಕಾರ.–** ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಸಮಿತಿಯು, ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು, ತಾನು ಅವಶ್ಯವೆಂದು ಭಾವಿಸಬಹುದಾದಂತಹ ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು (45ನೇ ಪ್ರಕರಣದ ಮೇರೆಗೆ ಉಪವಿಧಿಗಳನ್ನು ರಚಿಸಲು ಇರುವ ಅಧಿಕಾರಗಳನ್ನು ಹೊರತುಪಡಿಸಿ ಸಮಿತಿಯ ಯಾರೇ ಸದಸ್ಯನಿಗೆ ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**47. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಗಳ ಅಧಿಕಾರ.–** (1) ರಾಜ್ಯ ಸರ್ಕಾರಗಳು, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ, ಅಧಿಸೂಚನೆಯ ಮೂಲಕ, ರಾಜ್ಯ ಸಮಿತಿಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ,–

(i) 20ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸಮಿತಿಯ ಅಧ್ಯಕ್ಷನ ಮತ್ತು ಸದಸ್ಯರುಗಳ ನಿಬಂಧನೆಗಳು ಮತ್ತು ಷರತ್ತುಗಳು;

(ii) 22ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದ ಮೇರೆಗೆ ಸದಸ್ಯರನ್ನು ಪುನರ್ ನಾಮನಿರ್ದೇಶಿಸಬಹುದಾದ ರೀತಿ;

(iii) 27ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸಮಿತಿಯ ಕರ್ತವ್ಯಗಳು;

(iv) 29ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಾಹಕ ಅಧಿಕಾರಿಯ ಪ್ರಕಾರ್ಯಗಳು ಮತ್ತು ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(v) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ;

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು.

**48. ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಸ್ತಿತ್ವದಲ್ಲಿರುವ ಸಮಿತಿಯ ನೌಕರರಿಗೆ ಸಂಬಂಧಪಟ್ಟ ಉಪಬಂಧಗಳು.–** ಅಸ್ತಿತ್ವದಲ್ಲಿರುವ ಯಾವುದೇ ಸಮಿತಿಯ ಅಥವಾ ಸಂಧರ್ಭಾನುಸಾರ, ರಾಜ್ಯ ಸಮಿತಿಯ ಪ್ರತಿಯೊಬ್ಬ ಅಧಿಕಾರಿಯು ಮತ್ತು ಇತರ ನೌಕರನು, ಈ ಅಧಿನಿಯಮದ ಪ್ರಾರಂಭದಂದು ಮತ್ತು ಪ್ರಾರಂಭದಿಂದ, ಸಮಿತಿಯು ನಿರ್ಧರಿಸಬಹುದಾದಂಥ ಪದನಾಮದೊಂದಿಗೆ ಸಮಿತಿಗೆ ಅಥವಾ ಸಂದರ್ಭಾನುಸಾರ ರಾಜ್ಯ ಸಮಿತಿಗೆ ವರ್ಗಾವಣೆಯಾಗತಕ್ಕದ್ದು ಅಥವಾ ಅದರ ಅಧಿಕಾರಿಯಾಗತಕ್ಕದ್ದು ಅಥವಾ ಇತರ ನೌಕರನಾಗತಕ್ಕದ್ದು ಮತ್ತು ಹಜ್ ಸಮಿತಿ ಅಧಿನಿಯಮ, 1959 (1959ರ 51)ರ ಮೇರೆಗೆ ರಚಿತವಾದ ಹಜ್ ಸಮಿತಿಯ ಅಡಿಯಲ್ಲಿ ಅವನು ಹೊಂದಿರುವಂಥದ್ದೇ ಅವಧಿಗೆ ಅದೇ ಸಂಭಾವನೆಯಲ್ಲಿ ಮತ್ತು ಅದೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಸಮಿತಿಯಲ್ಲಿ, ಪದವನ್ನು ಅಥವಾ ಸೇವೆಯನ್ನು ಧಾರಣ ಮಾಡಿಕೊಡತಕ್ಕದ್ದು ಮತ್ತು ಅಂತಹ ಸಮಿತಿಯು

ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಯಥೋಚಿತವಾಗಿ ವ್ಯತ್ಯಸ್ತಗೊಳಿಸುವವರೆಗೆ ಸಮಿತಿಯ ಅಧಿಕಾರಿಯಾಗಿ ಅಥವಾ ಇತರ ನೌಕರನಾಗಿ ಹಾಗೆ ಪದಧಾರಣ ಮಾಡುವುದು ಮುಂದುವರಿಯತಕ್ಕದ್ದು:

ಪರಂತು, ಸಮಿತಿಯ ಅಥವಾ ಸಂದರ್ಭಾನುಸಾರ, ರಾಜ್ಯ ಸಮಿತಿಯ ಯಾರೇ ಅಂತಹ ಅಧಿಕಾರಿಯ ಅಥವಾ ಇತರ ನೌಕರನ ಅಧಿಕಾರಾವಧಿಯನ್ನು, ಸಂಭಾವನೆಯನ್ನು ಮತ್ತು ಸೇವಾ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಕೇಂದ್ರ ಸರ್ಕಾರದ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ, ಅವನಿಗೆ ಅನಾನೂಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ:

ಮತ್ತೂ ಪರಂತು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾರೇ ಅಂತಹ ಅಧಿಕಾರಿಯು ಅಥವಾ ಇತರ ನೌಕರನು ಸಲ್ಲಿಸಿದ ಯಾವುದೇ ಸೇವೆಯನ್ನು ಸಮಿತಿಯ ಅಥವಾ ಸಂದರ್ಭಾನುಸಾರ, ರಾಜ್ಯ ಸಮಿತಿಯ ಅಡಿಯಲ್ಲಿ ಸಲ್ಲಿಸಿದ ಸೇವೆಯೆಂಬುದಾಗಿ ಭಾವಿಸತಕ್ಕದ್ದು.

**49. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ವಿರುದ್ಧ ಅಥವಾ ಸರ್ಕಾರದ ಅಥವಾ ಈ ಅಧಿನಿಯಮದ ಮೇರೆಗೆ ರಚಿತವಾದ ಸಮಿತಿಯ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**50. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಆದೇಶದ ಮೂಲಕ ಆ ತೊಂದರೆಯನ್ನು ನಿವಾರಿಸಬಹುದು:

ಪರಂತು, ಅಂತಹ ಆದೇಶವನ್ನು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**51. ನಿರ್ದೇಶನಗಳನ್ನು ನೀಡಲು ಅಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಮತ್ತು ತನ್ನ ಪ್ರಕಾರ್ಯಗಳನ್ನು ನೆರವೇರಿಸುವಾಗ ಸಮಿತಿಗೆ ಅಥವಾ ರಾಜ್ಯ ಸರ್ಕಾರಕ್ಕೆ ಅಥವಾ ರಾಜ್ಯ ಸಮಿತಿಗೆ ಲಿಖಿತದಲ್ಲಿ ನಿರ್ದೇಶನಗಳನ್ನು ನೀಡಬಹುದು ಮತ್ತು ಸಂದರ್ಭಾನುಸಾರ, ಅಂತಹ ಸಮಿತಿಯು, ರಾಜ್ಯ ಸರ್ಕಾರವು ಅಥವಾ ರಾಜ್ಯ ಸಮಿತಿಯು ಅಂತಹ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕದ್ದು.

**52. ನಿರಸನ.–** (1) ಹಜ್ ಸಮಿತಿ ಅಧಿನಿಯಮ, 1959 (1959ರ 51)ನ್ನು ಈ ಮೂಲಕ ನಿರಸಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧಿನಿಯಮದ ಮೇರೆಗೆ ರಚಿತವಾದ ಹಜ್ ಸಮಿತಿಯು, ಈ ಅಧಿನಿಯಮದ ಮೇರೆಗೆ ಸಮಿತಿಯನ್ನು ಸ್ಥಾಪಿಸುವವರೆಗೆ, ಈ ಅಧಿನಿಯಮವನ್ನು ಅಂಗೀಕರಿಸಿರದಿದ್ದರೆ ಹೇಗೋ

ಹಾಗೆ ತನ್ನ ಪ್ರಕಾರ್ಯವನ್ನು ಮುಂದುವರಿಸತಕ್ಕದ್ದು ಮತ್ತು 5ನೇ ಪ್ರಕರಣದ ಮೇರೆಗೆ ಅಂತಹ ಅಧಿಸೂಚನೆ ಹೊರಡಿಸಿದ ಮೇಲೆ ಸಮಿತಿಯನ್ನು ಸ್ಥಾಪಿಸಿದ ನಂತರ ಈ ಮೊದಲಿನ ಸಮಿತಿಯು ವಿಸರ್ಜಿತವಾಗತಕ್ಕದ್ದು.

(3) ಹಾಗೆ ನಿರಸಿತವಾಗಿದ್ದರೂ, ಹಜ್ ಸಮಿತಿ ಅಧಿನಿಯಮ, 1959 (1959ರ 51)ರ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

## ಅನುಸೂಚಿ

(4(ii) ಮತ್ತು 41(1) ಪ್ರಕರಣಗಳನ್ನು ನೋಡಿ)

| | |
|---|---|
| ವಲಯ – I | ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯ ಕ್ಷೇತ್ರ, ರಾಜಸ್ಥಾನ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ ಮತ್ತು ಚಂಡೀಘಡ ಒಕ್ಕೂಟ ರಾಜ್ಯ ಕ್ಷೇತ್ರ. |
| ವಲಯ – II | ಉತ್ತರ ಪ್ರದೇಶ, ಉತ್ತರಾಂಚಲ ಮತ್ತು ಜಾರ್ಖಂಡ್ |
| ವಲಯ – III | ಆಂಧ್ರ ಪ್ರದೇಶ, ಮಧ್ಯಪ್ರದೇಶ, ಚತ್ತೀಸಘಡ ಮತ್ತು ಒರಿಸ್ಸಾ |
| ವಲಯ – IV | ಅಸ್ಸಾಂ, ಪಶ್ಚಿಮ ಬಂಗಾಳ, ತ್ರಿಪುರ, ಮಣಿಪುರ, ಸಿಕ್ಕಿಂ, ಮೇಘಾಲಯ, ಅರುಣಾಚಲ ಪ್ರದೇಶ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಒಕ್ಕೂಟ ರಾಜ್ಯಕ್ಷೇತ್ರ. |
| ವಲಯ – V | ಮಹಾರಾಷ್ಟ್ರ, ಗುಜರಾತ್, ಗೋವಾ ಮತ್ತು ದಾಮನ್ ಮತ್ತು ಡಿಯೂ ಮತ್ತು ದಾದ್ರ ಮತ್ತು ನಗರ ಹವೇಲಿ ಒಕ್ಕೂಟ ರಾಜ್ಯ ಕ್ಷೇತ್ರಗಳು. |
| ವಲಯ – VI | ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಪುದುಚೇರಿ ಮತ್ತು ಲಕ್ಷದ್ವೀಪ ಒಕ್ಕೂಟ ರಾಜ್ಯ ಕ್ಷೇತ್ರಗಳು. |

* * * * *